ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ

ಅಕ್ಟೋಬರ್ 2021
ಸಂಪುಟ 17, ಸಂಚಿಕೆ 06
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com



ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ವತಿಯಿಂದ
ಕಲಿಕಾ ಸಾಮಾಗ್ರಿ ಮತ್ತು ನೋಟ್ ಪುಸ್ತಕ ವಿತರಣೆ



ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ
–ಗಣೇಶ ಚತುರ್ಥಿ ಆಚರಣೆ




ಸದಸ್ಯತ್ವ ಕೈಪಿಡಿ ಅನಾವರಣ ಕಾರ್ಯಕ್ರಮ

**ಸರ್ವರಿಗೂ ನವರಾತ್ರಿ ಹಾಗೂ
ವಿಜಯದಶಮಿಯ ಶುಭಾಶಯಗಳು**


PRIME CASTLE'S
APPROVED RERA APPROVED
Neighbourhood
LUXURY APARTMENT
Elite
Arkavathy Layout, Sampigehalli, BENGALURU
VS BUILDER
VIVA MARINA
Adi Udupi, on Malpe Road, UDUPI
JUST PAY 1 Lakhs *
Budget Flats
30 Lakhs * Onwards
ROYAL RICH
Kalkere, Bengaluru
NIKITHA PARADISE
Banjara Layout, Bengaluru
BEST INVESTMENT WITH ASSURED RENTAL RETURN
www.theprimecastle.com
+91 98456 71100
+91 98450 90689
No. 982, HBR Layout, 1st Stage, 2nd Block,
80th feet Road, Bangalore 560045
info@theprimecastle.com

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 17** **OCTOBER 2021** **ISSUE 06**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಬೆಂಗಳೂರು ಬಂಟರ ಸಂಘ – ಸದಸ್ಯತ್ವ ಕೈಪಿಡಿ ಅನಾವರಣ | 5 |
| 5. | ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಗಣೇಶ ಚತುರ್ಥಿ ಆಚರಣೆ | 7 |
| 6. | ಬೆಂಗಳೂರು ಬಂಟರ ಸಂಘ – ಸಮಾಜ ಸೇವಾ ಸಮಿತಿ ಮತ್ತು ಸೇವಾದಳ | 9 |
| 7. | ಜಾಗತಿಕ ಬಂಟರ ಸಂಘಗಳ ಒಕ್ಕೂಟದ 25ನೇ ವಾರ್ಷಿಕ ಮಹಾಸಭೆ | 10 |
| 8. | Life after COVID | 11 |
| 9. | ಕೊಂಕು ಜೀವಿಯ ಮೆಲುಕು | 13 |
| 10. | ಕಾರ್ಗಿಲ್ ದಿನಗಳ ಆ ರಾತ್ರಿ | 15 |
| 11. | ನೈತಿಕ ಮೌಲ್ಯ ಮತ್ತು ಕುಟುಂಬ | 21 |
| 12. | ನಗು... ಇದರ ಅವ್ಯಕ್ತ ಶಕ್ತಿ ಏನು ? | 22 |

### ಮುಖಪುಟ

**ಸದಸ್ಯತ್ವ ಕೈಪಿಡಿ ಅನಾವರಣ ಕಾರ್ಯಕ್ರಮ**

**ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ - ಗಣೇಶ ಚತುರ್ಥಿ ಆಚರಣೆ**

**ಕಲಿಕಾ ಸಾಮಾಗ್ರಿ ಮತ್ತು ನೋಟ್ ಪುಸ್ತಕ ವಿತರಣೆ**

# ಸಂಪಾದಕೀಯ



## ಶ್ರದ್ಧೆ ಹಾಗೂ ಯಶಸ್ಸು

ಒಬ್ಬ ವ್ಯಕ್ತಿಯು ಸಂಪೂರ್ಣ ನಂಬಿಕೆಯೊಂದಿಗೆ ಏನನ್ನಾದರೂ ಅರ್ಪಿಸಿದಾಗ ಅವನು ಅದರ ಫಲವನ್ನು ಪಡೆಯುತ್ತಾನೆ. ಇಲ್ಲಿ ಭಕ್ತಿ, ಶ್ರದ್ಧೆ ಮತ್ತು ನಂಬಿಕೆ ಮುಖ್ಯವಾಗಿರುತ್ತದೆ. ಶ್ರೀಮದ್‌ಭಗವದ್ಗೀತೆಯಲ್ಲಿ ಹೇಳಿದಂತೆ ನಿಮ್ಮ ಹಕ್ಕು ನಿಮ್ಮ ಕರ್ತವ್ಯವನ್ನು ನಿರ್ವಹಿಸುವುದು ಮಾತ್ರ. ಅಲ್ಲಿ ಯಾವುದೇ ಫಲ, ಪರಿಣಾಮಗಳನ್ನು ನಿರೀಕ್ಷಿಸುವಂತಿಲ್ಲ. ನೀವು ನಿಮ್ಮ ಕರ್ಮದ ಫಲದಿಂದ ಪ್ರೇರೇಪಿತರಾಗಬಾರದು ಹಾಗೂ ನಿಮ್ಮ ಕ್ರಿಯೆಗಳು ನಿಮ್ಮನ್ನು ನಿಷ್ಕ್ರಿಯವಾಗಿಸಲು ಪ್ರೇರೇಪಿಸಲೂಬಾರದು.

ನಿಮ್ಮಲ್ಲಿ ಶ್ರದ್ಧೆ ಎನ್ನುವುದಿದ್ದರೆ, ನೀವು ನಿರಂತರವಾಗಿ ನಿಮ್ಮ ಕೆಲಸದಲ್ಲಿರಲೂ ಹಾಗೂ ನಿಮ್ಮ ಗುರಿಯನ್ನು ಸಾಧಿಸಲು ಸುಲಭವಾಗುತ್ತದೆ. ಸಾಮಾನ್ಯವಾಗಿ ನಮ್ಮಲ್ಲಿ ಯಾವಾಗಲೂ ಕೆಲವೊಂದು ಸಮಸ್ಯೆ, ಗೊಂದಲಗಳು ಇದ್ದೇ ಇರುತ್ತವೆ. ಅದರ ಪರಿಣಾಮವಾಗಿ ನಾವು ಕೆಲವೊಮ್ಮೆ ಶ್ರದ್ಧೆಯನ್ನು ಕಾಪಾಡಿಕೊಂಡು ಬರಲು ಕಷ್ಟವಾಗಬಹುದು. ಅಂತಹ ಸಮಯದಲ್ಲಿ ನಾವು ಬಹಳ ಎಚ್ಚರದಿಂದಿದ್ದು, ವಿಚಲಿತರಾಗದೇ, ಆತ್ಮಸ್ಥೈರ್ಯದಿಂದ ನಮ್ಮ ನಿಗದಿತ ಕಾರ್ಯಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಇಂತಹ ಸಮಯದಲ್ಲಿ ಕೆಲವರಲ್ಲಿ ನಾವು ಪ್ರೇರಣೆಯ ಕೊರತೆಯನ್ನು ಸಹಜವಾಗಿ ಕಾಣಬಹುದು. ಅಂತಹವರನ್ನು ಹುರಿದುಂಬಿಸುವುದು ಬಹಳ ಮುಖ್ಯವಾಗಿರುತ್ತದೆ. ಇಲ್ಲದಿದ್ದಲ್ಲಿ ಅವರ ಕೆಲಸದಲ್ಲಿ ಆಸಕ್ತಿ ಕಡಿಮೆಯಾಗಿ ಕೌಶಲ್ಯ ಮತ್ತು ಕಾರ್ಯಕ್ಷಮತೆಯಲ್ಲಿ ಶ್ರದ್ಧೆ ಇಲ್ಲದಿರುವುದೋ ಅಥವಾ ಕಡಿಮೆಯಾಗಿರುವುದು ಕಂಡು ಬರುತ್ತದೆ.

ಮೌಲ್ಯಾಧಾರಿತ ಯಶಸ್ಸನ್ನು ಸಾಧಿಸಲು ಮೂರು ಮಹತ್ವದ ಅವಶ್ಯಕತೆಗಳಿವೆ – ಅವು ಕಠಿಣ ಪರಿಶ್ರಮ, ದೀರ್ಘ ಪ್ರಯತ್ನ ಹಾಗೂ ಸಾಮಾನ್ಯ ಜ್ಞಾನ, ಜೊತೆಗೆ ಹೊಸತನವನ್ನೂ, ಸೃಜನಶೀಲತೆಯನ್ನು ಅಳವಡಿಸಿಕೊಂಡರೆ ಇನ್ನೂ ಉತ್ತಮ. ಅನೇಕರು ಸುಲಭದ ಪರಿಹಾರಕ್ಕಾಗಿ ಆಶಿಸುತ್ತಾರೆ, ಅಲ್ಲದೇ ಅದು ಒಂದೇ ಪ್ರಯತ್ನದಲ್ಲಿ ಆಗಬೇಕೆಂಬ ಆಸೆ. ಆದರೆ ಜೀವನದಲ್ಲಿ ಕೆಲವೇ ಕೆಲವೊಮ್ಮೆ ಮಾತ್ರ ಈ ರೀತಿಯಾಗಿ ಒಮ್ಮೆಲೇ ಕೆಲಸ ಆಗಿಬಿಡಬಹುದು ವಿನಹ, ನಿಜವಾದ ಯಶಸ್ಸಿಗಾಗಿ ನೂರಾರು ಸಣ್ಣ ಹೆಜ್ಜೆಗಳನ್ನಿಡಬೇಕಾಗುತ್ತದೆ. ಯಶಸ್ಸಿಗೆ ಯಾವುದೇ ರಹಸ್ಯಗಳಿಲ್ಲ. ಇದು ಪೂರ್ವ ತಯಾರಿ, ಕಠಿಣ, ನಿರಂತರ ಪರಿಶ್ರಮ ಮತ್ತು ವೈಫಲ್ಯಗಳಿಂದಾದ ಅನುಭವಗಳಿಂದಾಗುವ ಫಲಿತಾಂಶವಾಗಿರುತ್ತದೆ.

ಯಾವುದೇ ಕೆಲಸ ಮಾಡುವ ಮೊದಲೇ ಯಶಸ್ಸು ಸಿಗುವ ಏಕೈಕ ಸ್ಥಳ ಎಂದರೆ ನಿಘಂಟು (Dictionary). ಕಠಿಣ ಪರಿಶ್ರಮವು ಏನನ್ನಾದರೂ ಸಾಧಿಸಲು ಸಹಾಯ ಮಾಡಿದರೆ, ನಾವು ಏಕಾಗ್ರತೆಯಿಂದ ಮಾಡುವ ಕೆಲಸವು ಯಶಸ್ಸಿಗೆ ದಾರಿಯಾಗುತ್ತದೆ. ಒಬ್ಬ ಮೆಕ್ಯಾನಿಕ್ ತನ್ನ ಕೆಲಸವನ್ನು ಪರಿಪೂರ್ಣಗೊಳಿಸುವ ಮೊದಲು ತನ್ನ ಉಪಕರಣಗಳನ್ನು ಹರಿತಗೊಳಿಸಬೇಕಾಗುತ್ತದೆ. ಅದೇ ರೀತಿ ನೀವು ಉತ್ತಮ ಕೆಲಸ ಮಾಡುವಂತೆ ಒತ್ತಡ ಹೇರಲು ನಿಮ್ಮಲ್ಲಿ ಸಂಯಮ ಮತ್ತು ಸ್ವನಿಯಂತ್ರಣ, ಶ್ರದ್ಧೆ ಮತ್ತು ಇಚ್ಛಾಶಕ್ತಿ, ಹರ್ಷಚಿತ್ತತೆ ಹಾಗೂ ವಿಷಯಗಳ ಸಂಗ್ರಹ ವೃದ್ಧಿಯಾಗಬೇಕು.

ಶ್ರದ್ಧೆಯನ್ನು ಒಬ್ಬ ವ್ಯಕ್ತಿಯೊಳಗೆ ಇರಬೇಕಾದ ಹಲವು ಸದ್ಗುಣಗಳಲ್ಲಿ ಒಂದು ಎಂದು ಪರಿಗಣಿಸಲಾಗುತ್ತದೆ. ಶಿಕ್ಷಣದ ಆರಂಭದ ಹಂತದಲ್ಲಿಯೇ ನಾವು ಶ್ರದ್ಧೆಯಿಂದ ಕಾರ್ಯನಿರ್ವಹಿಸುವುದನ್ನು ನಿರೀಕ್ಷಿಸಬೇಕಾಗುತ್ತದೆ. ಶ್ರದ್ಧೆಯ ಕೊರತೆಗೆ ಪರಿಹಾರವೆಂದರೆ ಕೇವಲ ಅಭ್ಯಾಸ, ಸದ್ಗುಣಗಳ ತರಬೇತಿ. ಜೀವನದ ನಿರೀಕ್ಷೆಗಳು ಕಠಿಣ ಪರಿಶ್ರಮವನ್ನು ಅವಲಂಭಿಸಿರುತ್ತದೆ.

ಆದ್ದರಿಂದ ಯಾವುದೇ ಕೆಲಸವನ್ನು ಮಾಡುವಾಗ ಏನೇ ಅಡ್ಡಿ ಆತಂಕಗಳು ಬಂದರೂ, ಸ್ವಲ್ಪವೂ ವಿಚಲಿತರಾಗದೇ ನಮ್ಮ ಕೆಲಸಗಳನ್ನು ಪರಿಪೂರ್ಣ ಮಾಡಲು ಸಂಪೂರ್ಣ, ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು.

ಎಂ. ಮುರಲೀಧರ ಹೆಗ್ಡೆ
hegdemm@gmail.com

**ಸರ್ವರಿಗೂ ನವರಾತ್ರಿ ಹಬ್ಬದ ಶುಭಾಶಯಗಳು**

# ಅಧ್ಯಕ್ಷರ ಮಾತು



ಸದಸ್ಯ ಬಾಂಧವರೆಲ್ಲರಿಗೂ ನವರಾತ್ರಿ ಹಾಗೂ ವಿಜಯದಶಮಿಯ ಹಾರ್ದಿಕ ಶುಭಾಶಯಗಳು,

ಯಲಚಗುಪ್ಪೆಯಲ್ಲಿ ಆರಂಭಗೊಳ್ಳುತ್ತಿರುವ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ - II ವಿದ್ಯಾಸಂಸ್ಥೆಯ ಉದ್ಘಾಟನಾ ಕಾರ್ಯಕ್ರಮ 2021ರ ಡಿಸೆಂಬರ್ 12 ರಂದು ಹಾಗೂ ಪೂಜಾ ಕಾರ್ಯಗಳನ್ನು ಡಿಸೆಂಬರ್ 10 ರಂದು ನಡೆಸುವುದೆಂದು ನಮ್ಮ ಸಮಿತಿಯು ತೀರ್ಮಾನಿಸಿದೆ. ಉದ್ಘಾಟನಾ ಕಾರ್ಯಕ್ರಮವನ್ನು ವಿಶೇಷವಾಗಿ ಆಚರಿಸುವ ನಿಟ್ಟಿನಲ್ಲಿ ವಿವಿಧ ಸಮಿತಿಗಳನ್ನು (Organising Committee) ರಚಿಸಲಿದ್ದು, ಈ ಕಾರ್ಯಕ್ರಮದ ಆಯೋಜನೆಯಲ್ಲಿ ಸ್ವಯಂಸೇವಕರಾಗಿ ಹಾಗೂ ಸಲಹೆಗಾರರಾಗಿ ಸೇವೆ ಸಲ್ಲಿಸಲಿಚ್ಛಿಸುವವರು ನಮ್ಮನ್ನು ಸಂಪರ್ಕಿಸಬೇಕೆಂದು ವಿನಂತಿ.

2021 ರ ನವೆಂಬರ್ 7 ರಂದು ಸಂಘದಲ್ಲಿ ದೀಪಾವಳಿ ಆಚರಿಸುವುದೆಂದು ತೀರ್ಮಾನಿಸಿದ್ದೇವೆ.

ಕೈಗಾರಿಕೆ ಮತ್ತು ನವೋದ್ಯಮ ಸಮಿತಿಯ ವತಿಯಿಂದ 'ಬಂಟ ಉದ್ಯಮಿಗಳ ಸಮಾವೇಶ' (Bunt Entrepreneurs Meet) ಉದ್ಯಮಕ್ಕೆ ಸಂಬಂಧಿಸಿದ ಹಲವಾರು ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮದಲ್ಲಿ ಬಂಟ ಉದ್ಯಮಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ಹಾಗೂ ಕೋವಿಡ್‌ನಿಂದ ತಮ್ಮ ಅತ್ಯಾಪ್ತ ಸಂಬಂಧಿಕರನ್ನು ಕಳೆದುಕೊಂಡು ಜೀವನೋಪಾಯಕ್ಕೆ ಉದ್ಯೋಗ ಅರಸುತ್ತಿರುವ ಬಂಟ ಯುವಕ-ಯುವತಿಯರಿಗೆ ತಮ್ಮ ಸಂಸ್ಥೆಗಳಲ್ಲಿ ಅವರ ಅರ್ಹತೆಗನುಗುಣವಾಗಿ ಉದ್ಯೋಗ ಕಲ್ಪಿಸಿಕೊಡಬೇಕೆಂದು ವಿನಂತಿ.

ನಿಮ್ಮೆಲ್ಲರ ಪ್ರೋತ್ಸಾಹ ಹಾಗೂ ದಾನಿಗಳ ನೆರವಿನಿಂದ ಆರಂಭಗೊಂಡ ಜಯಪ್ರಸಾದ್ ಶೆಟ್ಟಿ ಇರ್ಮಾಡಿ ಬಂಟ್ಸ್ ಜೆಂಟ್ಸ್ ಹಾಸ್ಟೆಲ್ ಇಂದು ಸುಮಾರು 100 ಯುವಕರಿಗೆ ಅತೀ ಕನಿಷ್ಟ ದರದಲ್ಲಿ ವಸತಿ ಮತ್ತು ಊಟೋಪಚಾರ ವ್ಯವಸ್ಥೆಯನ್ನು ಕಲ್ಪಿಸುತ್ತಿದೆ. ನಮ್ಮ ಸಮಿತಿಯು 'ಅನ್ನದಾತ' ಎನ್ನುವ ನೂತನ ಪರಿಕಲ್ಪನೆಯನ್ನು ರೂಪಿಸಿದ್ದು ಈ ಯೋಜನೆಯು ಮೂಲಕ ಹಾಸ್ಟೆಲ್ ನಿವಾಸಿಗಳ ಊಟಕ್ಕೆ ಅಗತ್ಯವಿರುವ ಅಕ್ಕಿಗೆ ತಗುಲುವ ವೆಚ್ಚವನ್ನು ವಿವಿಧ ದಾನಿಗಳಿಂದ ದೇಣಿಗೆ ರೂಪದಲ್ಲಿ ಸಂಗ್ರಹಿಸಲು ಚಿಂತನೆ ನಡೆಸಲಾಗಿದೆ. ಈ ಯೋಜನೆಗೆ ಪ್ರತೀ ತಿಂಗಳು ಸುಮಾರು 40,000/- ಗಳ ಅಗತ್ಯವಿದ್ದು, ಹನಿಗೂಡಿ ಹಳ್ಳ ಎನ್ನುವ ಮಾತಿನಂತೆ ಕನಿಷ್ಟ 100 ದಾನಿಗಳು ನಮ್ಮೊಂದಿಗೆ ಕೈಜೋಡಿಸಿ ಅನ್ನದಾತ ಯೋಜನೆಯ ಸೇವಾಕರ್ತರಾಗಬೇಕೆಂದು ವಿನಂತಿಸುತ್ತಿದ್ದೇನೆ.

ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ನಮ್ಮೆಲ್ಲಾ ಕಾರ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ತಮಗೆಲ್ಲರಿಗೂ ನಾವು ಅಭಾರಿಯಾಗಿದ್ದೇವೆ. 2022 ರ ಜನವರಿ ತಿಂಗಳ ಕೊನೆಯ ವಾರದಲ್ಲಿ ಸಂಘದ ಆಡಳಿತ ಮಂಡಳಿ ಚುನಾವಣೆ ನಡೆಸಲು ಉದ್ದೇಶಿಸಲಾಗಿದೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಓಂ ಶ್ರೀ ಗುರುಭ್ಯೋ ನಮಃ

ಸರ್ವರಿಗೂ ದಸರಾ ಹಬ್ಬದ ಶುಭಾಶಯಗಳು. ಹಲವು ತಿಂಗಳುಗಳಿಂದ ಸಂಘದಲ್ಲಿ ಸ್ಥಗಿತಗೊಂಡಿದ್ದ ಕಾರ್ಯಕ್ರಮಗಳು ಹಾಗೂ ಅನೇಕ ಚಟುವಟಿಕೆಗಳು ಮತ್ತೆ ಪ್ರಾರಂಭವಾಗಿದ್ದು ಸಂತಸದ ವಿಷಯ.

ನೂತನ ಸದಸ್ಯತ್ವ ಕೈಪಿಡಿ ವರ್ಣರಂಜಿತ ಪುಟಗಳೊಂದಿಗೆ ಸುಂದರವಾಗಿ ಬಿಡುಗಡೆಯಾಗಿ ಸದಸ್ಯರ ಕೈ ಸೇರಿದೆ, ಪ್ರತಿಗಳು ಸಂಘದಲ್ಲಿ ಲಭ್ಯವಿದೆ. ಸೊಗಸಾದ ಮುಖಪುಟದೊಂದಿಗೆ ಹೊರತರಲು ಪ್ರಯತ್ನಿಸಿದ ಸದಸ್ಯತ್ವ ಮತ್ತು ಕೈಪಿಡಿ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ ಮತ್ತು ಸಂಚಾಲಕರಾದ ಶ್ರೀ ವಿಜೇತ್ ಶೆಟ್ಟಿ ಹಾಗೂ ಸದಸ್ಯರಿಗೆ ಧನ್ಯವಾದಗಳು. ಸುಂದರ ವಿನ್ಯಾಸಕ್ಕೆ ಸಹಕರಿಸಿದ ಶ್ರೀ ಮುರಲೀಧರ ಹೆಗ್ಡೆಯವರಿಗೆ ಕೃತಜ್ಞತೆಗಳು.

ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು, ಸಂಚಾಲಕರಾದ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಪ್ರತೀ ವರ್ಷದಂತೆ ಈ ವರ್ಷವೂ ಕೂಡ ಸಾಂಪ್ರದಾಯಿಕ ಸಡಗರದೊಂದಿಗೆ ಗಣೇಶೋತ್ಸವವನ್ನು ಆಚರಿಸಿದರು. ಅನೇಕ ವರ್ಷಗಳಿಂದ ಅನ್ನದಾನ ಸೇವೆ ನೀಡುತ್ತಿದ್ದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ದಂಪತಿಗಳು ಈ ವರ್ಷವೂ ಸೇವೆಯನ್ನು ನೀಡಿ ಗಣೇಶನ ಕೃಪೆಗೆ ಪಾತ್ರರಾದರು. ಹೂವಿನ ಅಲಂಕಾರದ ಸೇವೆಯನ್ನು ಈ ವರ್ಷವೂ ನೀಡಿದ ಶ್ರೀ ಸುಧಾಕರ ಶೆಟ್ಟಿ ಮತ್ತು ಕುಟುಂಬಕ್ಕೆ ಧನ್ಯವಾದಗಳು. ಲಡ್ಡು ಪ್ರಸಾದ ಸೇವೆಯನ್ನು ನಿರಂತರವಾಗಿ ನೀಡುತ್ತಾ ಬಂದಿದ್ದ ಸಂಘದ ಉಪಾಧ್ಯಕ್ಷರಾದ ಶ್ರೀ ಕೊರ್ಗಿ ಭೋಜರಾಜ್ ಶೆಟ್ಟಿ ಮತ್ತು ಕುಟುಂಬಕ್ಕೆ ಕೃತಜ್ಞತೆಗಳು. ಚಪ್ಪರದ ವ್ಯವಸ್ಥೆಯನ್ನು ನೀಡಿದ ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ ಮತ್ತು ಕುಟುಂಬಕ್ಕೆ ಧನ್ಯವಾದಗಳು.

ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ವತಿಯಿಂದ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ಮತ್ತು ಕಲಿಕಾ ಸಾಮಾಗ್ರಿಗಳ ವಿತರಣೆ ಕಾರ್ಯಕ್ರಮ ಮತ್ತು ಕೋವಿಡ್-19 ಲಸಿಕಾ ಶಿಬಿರ ಬಹಳ ಅರ್ಥಪೂರ್ಣವಾಗಿ ಮೂಡಿಬಂತು. ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ಚೇರ್‌ಪರ್ಸನ್‌ರಾದ ಶ್ರೀ ಎಂ.ಬಿ. ಉಮೇಶ್ ಶೆಟ್ಟಿ, ಸೇವಾದಳದ ಸಂಚಾಲಕರಾದ ಶ್ರೀ ಭಾಸ್ಕರ ಶೆಟ್ಟಿ, ಸಮಾಜ ಸೇವಾ ಸಮಿತಿಯ ಸಂಚಾಲಕರಾದ ಶ್ರೀ ಅಜಿತ್ ಶೆಟ್ಟಿ ಹಾಗೂ ಸದಸ್ಯರಿಗೆ ಸಂಘದ ಪರವಾಗಿ ಧನ್ಯವಾದಗಳು.

ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ, ಸಂಚಾಲಕರಾದ ಶ್ರೀ ಉದಯ್ ಶೆಟ್ಟಿ ಮತ್ತು ಅವರ ಸಮಿತಿ ಆಯೋಜಿಸಿದ ದತ್ತಿನಿಧಿ ಪ್ರಶಸ್ತಿ ವಿತರಣೆ ಬಹಳ ಸೊಗಸಾಗಿ ಮೂಡಿಬಂತು. ವಿವಿಧ ಕ್ಷೇತ್ರಗಳಿಂದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಲಾಯಿತು. ಸಂಘದ ಪರವಾಗಿ ಅವರ ಸಮಿತಿಯ ಕಾರ್ಯಕ್ಕೆ ಶ್ಲಾಘನೆ.

ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ, ಸಂಚಾಲಕರಾದ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಅವರ ಸಾರಥ್ಯದಲ್ಲಿ 'ದಕ್ಷ ಯಜ್ಞ' ಯಕ್ಷಗಾನ ಕಾರ್ಯಕ್ರಮ ಬಹಳ ಸೊಗಸಾಗಿ ಮೂಡಿಬಂತು. ಭಾಗವಹಿಸಿದ ಎಲ್ಲರಿಗೂ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಶಾಲೆ ವಿಜಯನಗರ ಮತ್ತು ಯಲಚಗುಪ್ಪೆಯಲ್ಲಿ ಗಾಂಧಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪ್ರೀತಿಯ ಬಂಧುಗಳೇ, ಕೋವಿಡ್‌ನಿಂದಾಗಿ ಸಂಘದ ಚುನಾವಣೆ ಕ್ಲಪ್ತ ಕಾಲದಲ್ಲಿ ನಡೆಸಲು ಸರಕಾರದ ನಿಬಂಧನೆಯಿಂದಾಗಿ ಮಾಡಲಾಗಲಿಲ್ಲ. ಈಗ ಪರಿಸ್ಥಿತಿ ಅನುಕೂಲವಾಗಿರುವುದರಿಂದ ಶೀಘ್ರದಲ್ಲಿ ಚುನಾವಣೆ ನಡೆಸಲು ಕಾರ್ಯಕಾರಿ ಸಮಿತಿ ನಿರ್ಧರಿಸಿದ್ದು, ಚುನಾವಣಾ ದಿನಾಂಕವನ್ನು ಮಾನ್ಯ ಸದಸ್ಯರುಗಳಿಗೆ ಮುಂಚಿತವಾಗಿ ತಿಳಿಸಲಾಗುವುದು. ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಶಾಲಾಡಳಿತ ಮಂಡಳಿಯ ಅಧ್ಯಕ್ಷರ ಆಯ್ಕೆ ಮತ್ತು ಬೈಲಾ ತಿದ್ದುಪಡಿಯ ಚರ್ಚೆ ನಡೆಯಲಿದೆ.

ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಗೌರವಾನ್ವಿತ ಸದಸ್ಯರು ಭಾಗವಹಿಸಿ ಸಂಘವನ್ನು ಬಲಪಡಿಸಬೇಕೆಂದು ನಮ್ರ ವಿನಂತಿ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಬೆಂಗಳೂರು ಬಂಟರ ಸಂಘ
# ಸದಸ್ಯತ್ವ ಕೈಪಿಡಿ ಅನಾವರಣ ಕಾರ್ಯಕ್ರಮ




ಬೆಂಗಳೂರು ಬಂಟರ ಸಂಘದ ಪ್ರಸಕ್ತ ಸಾಲಿನ ಸದಸ್ಯತ್ವ ಕೈಪಿಡಿಯನ್ನು ಗಣೇಶ ಚತುರ್ಥಿಯ ಶುಭ ದಿನದಂದು ಹೊಸತನ, ಹೊಸ ವಿನ್ಯಾಸದೊಂದಿಗೆ ಸರ್ವ ಸದಸ್ಯರ ಕೈ ಸೇರುವ ಉದ್ದೇಶದಿಂದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ಉಪಸ್ಥಿತಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಅನಾವರಣಗೊಳಿಸಿದರು.

ಸರಿ ಸುಮಾರು 16,000 ಸದಸ್ಯರ ಮಾಹಿತಿಯನ್ನೊಳಗೊಂಡ ನಮ್ಮ ಕೈಪಿಡಿಯು ಪರಸ್ಪರ ಸಂಪರ್ಕ ಸಾಧಿಸುವಲ್ಲಿ ಅನುಕೂಲವಾಗಲಿ ಎನ್ನುವ ನಿಟ್ಟಿನಲ್ಲಿ ಪ್ರಯತ್ನಿಸಲಾಗಿದೆ. ಇದಕ್ಕಾಗಿ ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರ ನೇತೃತ್ವದಲ್ಲಿ ಸದಸ್ಯತ್ವ ಕೈಪಿಡಿ ಸಮಿತಿಯು ಕಾರ್ಯ ನಿರ್ವಹಿಸಿದ್ದು, ಯಶಸ್ಸು ಸಾಧಿಸಿದೆ. ಪ್ರಸಕ್ತ ಸಾಲಿನ ಕೈಪಿಡಿ ರಚನೆ ಕೈಗೊಂಡ ಸಂದರ್ಭದಲ್ಲಿ ವಿಶ್ವವನ್ನು ಕಾಡಿದ ಕೊರೋನಾ ನಮ್ಮ ಕಾರ್ಯವನ್ನೂ ವಿಳಂಬಗೊಳಿಸಿತು.

ಇಂತಹ ಆರೋಗ್ಯ, ಆರ್ಥಿಕ ಹೊಡೆತದ ನಡುವೆಯೂ ಸದಸ್ಯತ್ವ ಕೈಪಿಡಿ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರು ನಮ್ಮ ಗೌರವಾನ್ವಿತ ಪ್ರಾಯೋಜಕರು ನಮ್ಮೊಂದಿಗೆ ಕೈಜೋಡಿಸಿ ಸಹಕರಿಸುವಂತೆ ಮಾಡಿದ ಕಾರ್ಯ ಅತ್ಯಂತ ಶ್ಲಾಘನೀಯವಾದುದ್ದು, ಹಾಗೆಯೇ ನಮ್ಮ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಹಲವರು ಪ್ರಾಯೋಜಕತ್ವ ನೀಡಿರುತ್ತಾರೆ ಹಾಗೂ ಪಾಯೋಜಕತ್ವವನ್ನು ತರುವಲ್ಲಿ ಸಹಕರಿಸಿದ್ದಾರೆ ಮತ್ತು ಸಂದರ್ಭೋಚಿತ ಸಲಹೆ–ಸೂಚನೆಗಳನ್ನು ನೀಡಿರುತ್ತಾರೆ. ಈ ಕಾರ್ಯದಲ್ಲಿ ಶ್ರೀ ಟಿ. ಸತೀಶ್ ಕುಮಾರ್ ಶೆಟ್ಟಿಯವರ ಶ್ರಮ ಅಭಿನಂದನೀಯ.

ಸುಮಾರು 17 ಲಕ್ಷ ರೂಪಾಯಿಗಳ ಮೊತ್ತವನ್ನು ಪ್ರಾಯೋಜಕರಿಂದ ಸಂಗ್ರಹಿಸಿ ಕೈಪಿಡಿಯ ಸಂಪೂರ್ಣ

ಖರ್ಚು– ವೆಚ್ಚಗಳನ್ನು ನಿಭಾಯಿಸಿ ಹೆಚ್ಚುವರಿ 5 ಲಕ್ಷ ರೂಪಾಯಿಗಳನ್ನು ಬಂಟರ ಸಂಘದ ಹುಡುಗರ ವಸತಿ ನಿಲಯಕ್ಕೆ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರ ವಿಶೇಷ ಮುತುವರ್ಜಿಯಲ್ಲಿ ಸದಸ್ಯತ್ವ ಕೈಪಿಡಿ ಸಮಿತಿಯು ನೀಡಿರುತ್ತದೆ.



ನಮ್ಮ ತಂಡದ ಹಿರಿಯ ಸಲಹೆಗಾರರಾದ ಶ್ರೀ ಮುರಳೀಧರ ಹೆಗ್ಡೆಯವರ ತಾಂತ್ರಿಕ ಸಲಹೆಯು ಉತ್ಕೃಷ್ಟ ಮಟ್ಟದ ಕೈಪಿಡಿಯಾಗಿ ಹೊರಬರಲು ಸಾಧ್ಯವಾಯಿತು. ಸಂಘದ ಮಾಜಿ ಕಾರ್ಯದರ್ಶಿ ಶ್ರೀ ಸುರೇಶ್ ಹೆಗ್ಡೆ ಕೊಳ್ಕೆಬೈಲ್‌ರವರ ಅನುಭವ, ಸಲಹೆ ಉತ್ತಮ ಕೈಪಿಡಿಯನ್ನು ರೂಪಿಸಿತು. ಹಾಗೆಯೇ ನಮ್ಮ ಸದಸ್ಯತ್ವ ಕೈಪಿಡಿ ಸಮಿತಿಯ ಸದಸ್ಯರಾದ ಶ್ರೀ ಜಯಕರ ಶೆಟ್ಟಿ, ಶ್ರೀ ಎಸ್. ಸುಧಾಕರ ಶೆಟ್ಟಿ, ಶ್ರೀ ಕರುಣಾಕರ ಸಾಮನಿ, ಶ್ರೀಮತಿ ನಾಗರತ್ನ ಶೆಟ್ಟಿ, ಶ್ರೀಮತಿ ನವೀನಾ ಶೆಟ್ಟಿ, ಶ್ರೀ ನವೀನ್ ಕುಮಾರ್ ಶೆಟ್ಟಿ, ಶ್ರೀ ಉಮೇಶ್ ರೈ, ಶ್ರೀಮತಿ ಸುಮಿತ್ರಾ ಶೆಟ್ಟಿ, ಶ್ರೀ ಬಿ. ಭಾಸ್ಕರ ಶೆಟ್ಟಿ ಇವರೆಲ್ಲರ ಪರಿಶ್ರಮ, ಸಲಹೆ, ಕೊಡುಗೆ ಅನನ್ಯವಾದುದ್ದು. ಸಂಘದ ಸಿಬ್ಬಂದಿ ವರ್ಗ ಹಾಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನೂ ಸ್ಮರಿಸುತ್ತೇವೆ.

ಪ್ರಾರ್ಥನೆಯೊಂದಿಗೆ ಆರಂಭವಾದ ನಮ್ಮ ಸಭಾ ಕಾರ್ಯಕ್ರಮದಲ್ಲಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರು ಸರ್ವರನ್ನೂ ಸ್ವಾಗತಿಸಿ ಪ್ರಾಸ್ತವಿಕ ಭಾಷಣವನ್ನು ಮಾಡಿದರು. ಚಿಣ್ಣರ ಯಕ್ಷಗಾನ ವೇಷವು ಸಭಾಕಾರ್ಯಕ್ರಮಕ್ಕೆ ಮೆರುಗನ್ನು ನೀಡಿತ್ತು. ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ, ಖಜಾಂಚಿ ಶ್ರೀ ದೀಪಕ್ ಶೆಟ್ಟಿ ಕೈಪಿಡಿಯ ಬಗ್ಗೆ ಪ್ರಶಂಸನೀಯ ಮಾತುಗಳನ್ನಾಡಿದರು. ಉಪಾಧ್ಯಕ್ಷರುಗಳಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಶ್ರೀಮತಿ ಅಮೃತ ಎಸ್. ಶೆಟ್ಟಿಯವರು ಉಪಸ್ಥಿತರಿದ್ದರು. ಸಂಚಾಲಕರಾದ ಶ್ರೀ ವಿಜೇತ್ ಶೆಟ್ಟಿಯವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮ ಸಮಾರೋಪಗೊಂಡಿತು.

**ವಿಜೇತ್ ಶೆಟ್ಟಿ**
ಸಂಚಾಲಕರು, ಸದಸ್ಯತ್ವ ಮತ್ತು ಕೈಪಿಡಿ ಸಮಿತಿ

# ಬಂಟರ ಸಂಘ ಬೆಂಗಳೂರು

## ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಗಣೇಶ ಚತುರ್ಥಿ ಆಚರಣೆ



ದಿನಾಂಕ 10.09.2021ರಂದು ಗಣೇಶ ಚತುರ್ಥಿ ಆಚರಣೆಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಗಣೇಶ ಮೂರ್ತಿಯ ಪ್ರತಿಷ್ಠಾಪನೆಯೊಂದಿಗೆ ಸರಳವಾಗಿ ಆಚರಿಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ದಂಪತಿ, ಉಪಾಧ್ಯಕ್ಷರಾದ ಕೊರ್ಗಿ ಶ್ರೀ ಭೋಜರಾಜ್ ಶೆಟ್ಟಿ ದಂಪತಿಯವರ ಪೂಜಾ ದೀಕ್ಷೆಯೊಂದಿಗೆ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿಯವರ ಉಪಸ್ಥಿತಿಯೊಂದಿಗೆ ಹಾಗೂ ಭಕ್ತರ ಸಮ್ಮುಖದಲ್ಲಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಿತು.

ಬೆಳಿಗ್ಗೆ 8.00 ಗಂಟೆಗೆ ವಿನಾಯಕನಿಗೆ ವಿಶೇಷ ಪಂಚಾಮೃತ ಅಭಿಷೇಕ, ಗಣಪತಿ ಹೋಮ, ಗಣೇಶ ಮೂರ್ತಿಯ ಪ್ರತಿಷ್ಠಾಪನೆ, ಕಲ್ಪೋಕ್ತ ಪೂಜೆ ಹಾಗೂ ಶ್ರೀ ಪಳ್ಳಿ ವಿಶ್ವನಾಥ ಶೆಟ್ಟಿ ಮತ್ತು ತಂಡದವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಮಧ್ಯಾಹ್ನ ಸುಮಾರು 800 ಭಕ್ತಾದಿಗಳಿಗೆ ಅನ್ನ ಪ್ರಸಾದವನ್ನು ಏರ್ಪಡಿಸಿದ್ದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ತಂತ್ರಾಡಿ ದಂಪತಿಗಳಿಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಹೋಟೆಲ್ ಉದ್ಯಮಿ ಶ್ರೀ ಸುಧಾಕರ ಶೆಟ್ಟಿ (ಕೂಲ್ ಕಾರ್ನರ್) ದೇವಸ್ಥಾನಕ್ಕೆ ಪ್ರತೀ ವರ್ಷವೂ ಹೂವಿನ ಅಲಂಕಾರ ಮಾಡಿ ಕೊಡುತ್ತಿದ್ದು ಈ ವರ್ಷವೂ ಅವರೇ ಅದರ ಸಂಪೂರ್ಣ ವೆಚ್ಚವನ್ನು ಭರಿಸಿದ್ದಾರೆ. ಖ್ಯಾತ ಕೃಷಿ ಉದ್ಯಮಿ, ಕೊಡುಗೈ ದಾನಿಗಳಾದ ಶ್ರೀಮತಿ ಸುಜಯಾ ಹಾಗೂ ಶ್ರೀ ಇರ್ಮಾಡಿ ಜಯಪ್ರಸಾದ ಶೆಟ್ಟಿ ದಂಪತಿಗಳು ದೇವಸ್ಥಾನಕ್ಕೆ ವರ್ಷಂಪ್ರತಿಯಂತೆ ಅಂದವಾದ ಚಪ್ಪರವನ್ನು ಹಾಕಿಕೊಡುವುದರ ಜೊತೆಯಲ್ಲಿ ಧನ ಸಹಾಯವನ್ನು ಮಾಡಿದ್ದಾರೆ. ಸಂಘದ ಪ್ರಥಮ ಉಪಾಧ್ಯಕ್ಷರಾದ ಶ್ರೀ ಕೊರ್ಗಿ ಭೋಜರಾಜ ಶೆಟ್ಟಿಯವರು ಲಡ್ಡು ಪ್ರಸಾದವನ್ನು ಹಾಗೂ ಕಡಲೆಕಾಯಿ ಪ್ರಸಾದವನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀಮತಿ ಕಲಾವತಿ ಬಿ. ಶೆಟ್ಟಿಯವರು ಒದಗಿಸಿಕೊಟ್ಟಿರುತ್ತಾರೆ. ಇವರೆಲ್ಲರಿಗೂ ಸಂಘದ ಪರವಾಗಿ ಅಭಿನಂದನೆಗಳು.

ಭಜನಾ ತಂಡದ ಪ್ರಾಯೋಜಕತ್ವ ಹಾಗೂ ಶ್ರೀ ಗಣೇಶ ಮೂರ್ತಿಯನ್ನು ನೀಡಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಕುತ್ಯಾರು ಶ್ರೀ ರಾಜೇಶ್ ಶೆಟ್ಟಿಯವರಿಗೆ ಸಂಘದ ಪರವಾಗಿ ಅಭಿನಂದನೆಗಳು.

ಶ್ರೀ ವರಸಿದ್ಧಿ ಪ್ರಾರ್ಥನಾ ಮಂದಿರಕ್ಕೆ ಪ್ರತೀ ತಿಂಗಳು 100 ತೆಂಗಿನಕಾಯಿಗಳನ್ನು ದೇಣಿಗೆ ನೀಡುತ್ತಿರುವ ಶ್ರೀ ಭಾಸ್ಕರ್ ಶೆಟ್ಟಿ, ಎಸ್.ಎಲ್.ವಿ. ಕಾಂಡಿಮೆಂಟ್ಸ್ ಹಾಗೂ ಪ್ರತೀ ದಿನ ಹೂವಿನ ಸೇವೆ ಮತ್ತು ಪ್ರಾರ್ಥನಾ ಮಂದಿರದ ಸಮಾರಂಭಗಳಿಗೆ ವಿದ್ಯುತ್ ದೀಪಾಲಂಕಾರದ ವ್ಯವಸ್ಥೆಯನ್ನು ನೀಡುತ್ತಿರುವ ರಾಜ್ ಇಲೆಕ್ಟ್ರಿಕಲ್ಸ್‌ನ ಶ್ರೀ ಕೆ. ನಾಗರಾಜ್ ರೈ ಇವರಿಗೂ ಸಂಘದ ಪರವಾಗಿ ಅಭಿನಂದನೆಗಳು.

ಈ ಎಲ್ಲಾ ಪೂಜಾ ಕಾರ್ಯಕ್ರಮಗಳಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಭಕ್ತಾದಿಗಳು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು.

ಈ ಸಮಾರಂಭಕ್ಕೆ ಧನ ಸಹಾಯ ನೀಡಿದವರು:

- ಶ್ರೀಮತಿ ಸರ್ವಾಣಿ ಗಿರೀಶ್ ರೈ
- ಶ್ರೀ ಮುರಲೀಧರ ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರು
- ಶ್ರೀಮತಿ ತಾರಾಮಣಿ ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರು
- ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ
- ಶ್ರೀ ಅಮರನಾಥ ಶೆಟ್ಟಿ
- ಶ್ರೀ ಮೋಹನ್ ಶೆಟ್ಟಿ, ಹೋಟೆಲ್ ಪೋರ್ಟ್ ಆಫ್ ಪೆವಿಲಿಯನ್
- ಶ್ರೀ ಜಯರಾಜ್ ಶೆಟ್ಟಿ, ಹೋಟೆಲ್ ರಾಜಧಾನಿ
- ಶ್ರೀ ನಿತ್ಯಾನಂದ ಶೆಟ್ಟಿ ಮತ್ತು ಗ್ಲೈನ್ ಡಿಸೋಜಾ
- ಶ್ರೀ ಪ್ರೇಮನಾಥ ಶೆಟ್ಟಿ, ಹೋಟೆಲ್ ಪಿಂಗಾರ
- ಶ್ರೀ ಆನಂದರಾಮ ಶೆಟ್ಟಿ, ಮಾಜಿ ಖಜಾಂಚಿ
- ಶ್ರೀ ದೀಪಕ್ ಶೆಟ್ಟಿ, ಖಜಾಂಚಿ
- ಶ್ರೀ ರತ್ನಾಕರ ಶೆಟ್ಟಿ ಕಟ್ಕೇರೆ, ಮಾಜಿ ಪ್ರಾರ್ಥನಾ ಸಮಿತಿಯ ಚೇರ್‌ಮೆನ್
- ಡಾ. ನಿಶಾಕಾಂತ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
- ಶ್ರೀ ಪಮೋದ್ ರೆಡ್ಡಿ, ಹೋಟೆಲ್ ಸ್ಕೈ ಹೆವೆನ್
- ಮೆ। ಶೀಲಾ ಇಂಕ್ವಿಪ್‌ಮೆಂಟ್ಸ್ ಪ್ರೈ.ಲಿ.

ಈ ಎಲ್ಲಾ ಪೂಜಾ ಕಾರ್ಯಕ್ರಮಗಳಿಗೆ ಉದಾರ ದೇಣಿಗೆ ನೀಡಿ ಸಹಕರಿಸಿದ ದಾನಿಗಳನ್ನು ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಮ್ಮುಖದಲ್ಲಿ ಶಾಲು ಹೊದಿಸಿ, ಪ್ರಸಾದ ನೀಡಿ ಗೌರವಿಸಲಾಯಿತು. ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು.

**ಶ್ರೀ ಉಮೇಶ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು**
ಚೇರ್‌ಮೆನ್, ಪ್ರಾರ್ಥನಾ ಮಂದಿರ ಸಮಿತಿ

# ಬೆಂಗಳೂರು ಬಂಟರ ಸಂಘ–ಸಮಾಜ ಸೇವಾ ಸಮಿತಿ ಮತ್ತು ಸೇವಾದಳ

## ಕಲಿಕಾ ಸಾಮಾಗ್ರಿ ಮತ್ತು ನೋಟ್ ಪುಸ್ತಕ ವಿತರಣೆ ಹಾಗೂ ಕೋವಿಡ್–19 ಲಸಿಕಾ ಶಿಬಿರ




ಬೆಂಗಳೂರು ಬಂಟರ ಸಂಘದ ಸಮಾಜಸೇವಾ ಸಮಿತಿ ಮತ್ತು ಸೇವಾದಳದ ತಂಡವು 2018–2019ರ ಸಾಲಿನಲ್ಲಿ ಕರಾವಳಿ ಭಾಗದ ನಾಲ್ಕು ತಾಲೂಕಿನ ಅತೀ ಹಿಂದುಳಿದ ಪ್ರದೇಶಗಳ ಶಾಲೆಗಳನ್ನು ಭೇಟಿ ನೀಡಿ, ಗುರುತಿಸಿ, ಅಲ್ಲಿಗೆ ನೇರವಾಗಿ ಭೇಟಿಕೊಟ್ಟು ಮಕ್ಕಳ ಜೊತೆಯಲ್ಲಿ ಬೆರೆತು ಅವರಿಗೆ ಒಂದು ವರ್ಷಕ್ಕೆ ಆಗುವಷ್ಟು ಸಂಪೂರ್ಣ ಪುಸ್ತಕ ಹಾಗೂ ಕಲಿಕಾ ಮತ್ತು ಆಟೋಟ ಸಾಮಾಗ್ರಿ ವಿತರಿಸಲಾಗಿತ್ತು. ಆದಾದ ಮೇಲೆ ಈಗ ಕೊರೋನಾ ಮಹಾಮಾರಿ ಬಂದು ಬೆಂಗಳೂರು ನಗರದ ಜೀವನ ವ್ಯವಸ್ಥೆ ಅಸ್ತವ್ಯಸ್ಥಗೊಳಿಸಿದ್ದು ಬೆಂಗಳೂರು ಬಂಟರ ಸಂಘದ ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ವತಿಯಿಂದ ಕಲಿಕಾ ಸಾಮಾಗ್ರಿ ಮತ್ತು ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ದಿನಾಂಕ 10.09.2021ರಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಸುಮಾರು 300ಕ್ಕೂ ಹೆಚ್ಚು ಆರ್ಥಿಕವಾಗಿ ಹಿಂದುಳಿದ ಮಕ್ಕಳು ಈ ಯೋಜನೆಯ ಪ್ರಯೋಜನವನ್ನು ಪಡೆದರು. ಈ ಸಹಾಯಹಸ್ತ ಕಾರ್ಯಕ್ರಮದಲ್ಲಿ ನಮ್ಮ ಬೆಂಗಳೂರಿನ ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ಬಂಟರನ್ನು ಗುರುತಿಸಿ, ಅವರು ಶೈಕ್ಷಣಿಕವಾಗಿ ಸರ್ವತೋಮುಖ ಅಭಿವೃದ್ಧಿ ಹೊಂದಲು ಬೇಕಾದ ಪರಿಕರಗಳನ್ನು ಈ ಮೂಲಕ ಒದಗಿಸಿದ್ದಾರೆ. ಈ ಕಾರ್ಯಕ್ರಮದ ಮೂಲ ಉದ್ದೇಶದಂತೆ ಈ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಉಪಾಧ್ಯಕ್ಷರುಗಳಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ ಮತ್ತು ಶ್ರೀಮತಿ ಅಮೃತ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿಯವರಾದ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿ ಶ್ರೀ ದೀಪಕ್ ಶೆಟ್ಟಿ, ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಚೇರ್‌ಪರ್ಸನ್ ಶ್ರೀ ಉಮೇಶ್ ಶೆಟ್ಟಿ ಎಂ.ಬಿ., ಕಾರ್ಯಕಾರಿ ಸಮಿತಿ ಸದಸ್ಯರು, ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಸದಸ್ಯರು ಭಾಗವಹಿಸಿದ್ದರು.




ಕೊರೋನಾ ಮಹಾಮಾರಿಯಿಂದ ತತ್ತರಿಸಿದ ಬೆಂಗಳೂರಿನ ಜನರು ಲಸಿಕೆಗಾಗಿ ಪರದಾಡುತ್ತಿರುವ ತೀವ್ರ ಸ್ಥಿತಿಯಲ್ಲಿ "ಪರೋಪಕಾರಂ ಇದಂ ಶರೀರಂ" ಎಂಬಂತೆ ಬೆಂಗಳೂರು ಬಂಟರ ಸಂಘದ ಸಮಾಜ ಸೇವಾ ಸಮಿತಿ ಹಾಗೂ ಸೇವಾದಳದ ವತಿಯಿಂದ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ಉಚಿತ ಕೋವಿಡ್ ಲಸಿಕಾ ಶಿಬಿರವನ್ನು ದಿನಾಂಕ 17.09.2021 ಮತ್ತು 22.09.2021ರಂದು ಸಂಘದ ಆವರಣದಲ್ಲಿ ಆಯೋಜಿಸಲಾಗಿತ್ತು. ಹಲವಾರು ಮಂದಿ ಈ ಶಿಬಿರದ ಪ್ರಯೋಜನವನ್ನು ಪಡೆದರು.

**ಉಮೇಶ್ ಶೆಟ್ಟಿ ಎಂ.ಬಿ.**
ಚೇರ್‌ಮೆನ್, ಸಮಾಜ ಸೇವಾ ಸಮಿತಿ ಮತ್ತು ಸೇವಾದಳ

# ಜಾಗತಿಕ ಬಂಟರ ಸಂಘಗಳ ಒಕ್ಕೂಟದ 25ನೇ ವಾರ್ಷಿಕ ಮಹಾಸಭೆ

## ಒಕ್ಕೂಟದ ವತಿಯಿಂದ ಅಶಕ್ತರಿಗೆ ನಿರಂತರ ನೆರವಿಗೆ ಬದ್ಧ: ಐಕಳ ಹರೀಶ ಶೆಟ್ಟಿ

ಮಂಗಳೂರು: ಜಾಗತಿಕ ಬಂಟರ ಸಂಘಗಳ ಒಕ್ಕೂಟ (ರಿ) ಮಂಗಳೂರು ಇದರ 25 ನೇ ವಾರ್ಷಿಕ ಮಹಾಸಭೆಯು ಕುರ್ಲಾ ಪೂರ್ವ ಬಂಟರ ಭವನದ ಶ್ರೀಮತಿ ರಂಜನಿ ಸುಧಾಕರ ಹೆಗ್ಡೆ ಸಮಾಜ ಕಲ್ಯಾಣ ಎನೆಕ್ಸ್ ಸಂಕೀರ್ಣದಲ್ಲಿ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಹಾಸಭೆಯನ್ನು ಒಕ್ಕೂಟದ ಅಧ್ಯಕ್ಷ ಶ್ರೀ ಐಕಳ ಹರೀಶ ಶೆಟ್ಟಿಯವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಶ್ರೀ ಐಕಳ ಹರೀಶ್ ಶೆಟ್ಟಿಯವರು ಸಭೆಯಲ್ಲಿ ಹಾಜರಿದ್ದ ದಾನಿಗಳಿಗೆ, ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹಾಗೂ ಎಲ್ಲಾ ಗಣ್ಯರನ್ನು ಅಭಿನಂದಿಸುತ್ತಾ, ಜಾಗತಿಕ ಬಂಟರ ಸಂಘಗಳ ಒಕ್ಕೂಟವು ಒಂದು ದೊಡ್ಡ ದೇವಸ್ಥಾನ ಇದ್ದಂತೆ. ಇಲ್ಲಿ ದಾನಿಗಳೇ ದೇವರು. ಪ್ರಾಯೋಜಕರೇ ಭಕ್ತರು. ಬಂಟ ಬಂಧುಗಳೇ ಆಶೀರ್ವಚಕರು. ಸಹೃದಯಿ ದೊಡ್ಡ ಮನಸ್ಸಿನ ದಾನಿಗಳೇ ಆಸ್ತಿಕರು. ಇವರನ್ನೆಲ್ಲರನ್ನೂ ಒಗ್ಗೂಡಿಸಿ ಮುನ್ನಡೆಯುವ ಉದ್ದೇಶ ಒಕ್ಕೂಟದ್ದು. ಇವರೆಲ್ಲರ ಸಹಯೋಗದಿಂದ ಸಮಾಜದ ಜನತೆಯ ಕಣ್ಣೊರೆಸುವ ಕೆಲಸ ಸಾಗುತ್ತಿದೆ. ಇಂತಹ ಸೇವಾ ಕೈಂಕರ್ಯದಲ್ಲಿ ನನಗೆ ತೃಪ್ತಿಯಿದೆ ಎಂದರು. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ ಸ್ವಾಗತಿಸಿ, ಒಕ್ಕೂಟದ 2020–21 ಸಾಲಿನ ವರದಿ ನೀಡಿ ಸಮಾಜ ಕಲ್ಯಾಣ ವತಿಯಿಂದ ನೀಡಿದ ಧನಸಹಾಯದ ಬಗ್ಗೆ ವಿವರವಾಗಿ ಸಭೆಗೆ ತಿಳಿಸಿದರು. ಕೋಶಾಧಿಕಾರಿ ಶ್ರೀ ಉಳ್ತೂರು ಮೋಹನದಾಸ್ ಶೆಟ್ಟಿಯವರು 2020–21 ರ ಸಾಲಿನ ಲೆಕ್ಕ ಪತ್ರವನ್ನು ಮಂಡಿಸಿದರು. ಒಕ್ಕೂಟದ ಉಪಾಧ್ಯಕ್ಷ ಶ್ರೀ ಕರ್ನಿರೆ ವಿಶ್ವನಾಥ ಶೆಟ್ಟಿಯವರು ಒಕ್ಕೂಟಕ್ಕೆ ದಾನವಾಗಿ ನೀಡಿದ ಬಳ್ಕುಂಜೆ ಗ್ರಾಮದ ಕರ್ನಿರೆಯಲ್ಲಿ ಒಂದು ಎಕ್ರೆ ನಿವೇಶನದ ಕಾಮಗಾರಿಯ ಬಗ್ಗೆ ವಿವರಣೆ ನೀಡಿದರು. ಜತೆ ಕಾರ್ಯದರ್ಶಿ ಶ್ರೀ ಸತೀಶ್ ಅಡಪ ಸಂಕಬೈಲ್ ವಂದನಾರ್ಪಣೆಗೈದರು. ಈ ಸಂದರ್ಭದಲ್ಲಿ ನೂತನ ನಿರ್ದೇಶಕ ಪ್ರವೀಣ್ ಭೋಜ ಶೆಟ್ಟಿ, ಬಂಟರ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಡಾ. ಆರ್.ಕೆ. ಶೆಟ್ಟಿ ಮುಂಬೈ, ಮುಲುಂಡ್ ಬಂಟ್ಸ್ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಫಲಿಮಾರು, ಥಾಣೆ ಬಂಟ್ಸ್ ಸಂಘದ ಅಧ್ಯಕ್ಷ ವೇಣುಗೋಪಾಲ್ ಶೆಟ್ಟಿ, ಪುಣೆ ಬಂಟರ ಸಂಘದ ಅಧ್ಯಕ್ಷ ಸಂತೋಷ್ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹಾಗೂ ಸಭೆಯಲ್ಲಿ ವಿವಿಧ ಬಂಟರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಆಡಳಿತಾಧಿಕಾರಿ ಶ್ರೀ ಸಚ್ಚಿದಾನಂದ ಹೆಗ್ಡೆ ಮತ್ತಿತರು ಉಪಸ್ಥಿತರಿದ್ದರು.

### ಬಹಿರಂಗ ಅಧಿವೇಶನ

ಆರಂಭದಲ್ಲಿ ಒಟ್ಟು 12 ಬಂಟರ ಸಂಘಗಳ ತಂಡಗಳಿಂದ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮ ನಡೆಯಿತು. ಇದರ ನಿರೂಪಣೆಯನ್ನು ಶ್ರೀ ಕರ್ನೂರು ಮೋಹನ್ ರೈಯವರು ನಿರೂಪಿಸಿದರು. ತದನಂತರ ಮುಂಬೈನ ಶ್ರೀಮತಿ ರಾಧಾಭಾಯಿ ತಿಮ್ಮಪ್ಪ ಭಂಡಾರಿ ಸಭಾಂಗಣದಲ್ಲಿ ನಡೆದ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಬಹಿರಂಗ ಅಧಿವೇಶನದ ಉದ್ಘಾಟನೆಯನ್ನು ಮುಂಬೈ ಬಂಟ್ಸ್ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಹಾಸ್ ಕೆ. ಶೆಟ್ಟಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾದ ಒಕ್ಕೂಟದ ನಿರ್ದೇಶಕ ಶ್ರೀ ಆನಂದ್ ಶೆಟ್ಟಿ ತೋನ್ಸೆ, ಅಧ್ಯಕ್ಷರಾದ ಶ್ರೀ ಐಕಳ ಹರೀಶ್ ಶೆಟ್ಟಿ, ಶ್ರೀಮತಿ ಚಂದ್ರಿಕಾ ಹರೀಶ್ ಶೆಟ್ಟಿ, ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಶ್ರೀ ಪದ್ಮನಾಭ ಎಸ್ ಪಯ್ಯಡೆ, ನಿಕಟಪೂರ್ವ ಅಧ್ಯಕ್ಷರು, ಬಂಟರ ಸಂಘ ಮುಂಬೈ, ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಶ್ರೀ ಸತೀಶ್ ಶೆಟ್ಟಿ ಪಟ್ಲ, ಮತ್ತು ಶ್ರೀ ಜಗನ್ನಾಥ್ ಶೆಟ್ಟಿ ಬಾಳ, ಸದಸ್ಯರು, ಕರ್ನಾಟಕ ಸರಕಾರ ಮಾಧ್ಯಮ ಅಕಾಡೆಮಿ, ಬೆಂಗಳೂರು ಇವರುಗಳನ್ನು ಗೌರವಿಸಿ ಸನ್ಮಾನಿಸಲಾಯಿತು. ಅಲ್ಲದೇ ವೇದಿಕೆಯಲ್ಲಿ ಉಪಸ್ಥಿತರಿದ್ದ ದಾನಿಗಳಾದ ನಿರ್ದೇಶಕರು, ಮಹಾಪೋಷಕರು, ಪೋಷಕರುಗಳನ್ನು ಹಾಗೂ ವಿವಿಧ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಹಾಗೂ ಇತರ ಗಣ್ಯರನ್ನು ಗೌರವಿಸಲಾಯಿತು.

# LIFE AFTER COVID



Dr. Meera Krishnappa

Today, the world is facing an unprecedented global crisis, thanks to the Covid 19 virus. Who would have thought that a tiny virus would create such havoc that the entire human race has to rethink the way it happily existed before. I recently received a forward on 'Teachers day' saying that the greatest teacher of all times has been 'COVID'.

This crisis then, is a revelation in a far more literal sense—it is focusing our collective attention on the many injustices and weaknesses that already exist in how we live together. If people were blind to these faults before, it is hard not to see them now.

Man has overcome dreaded infections such as plague, small pox, polio and malaria but this infection has brought us to our knees.

Social Distancing, Face Masks, Frequent washing of hands and disinfection of all products, has become mandatory while working from home and online classes have become the new normal.

Businesses have been hit. Small vendors, migrant labour, eateries, malls all have taken a beating and the ripple effect is far reaching.

This is therefore the time for serious introspection and reflection.

Man with the help of science and technology has touched great heights literally and figuratively. The world had become fast paced, techno savvy and materialistic. Power and Wealth decided a person's status but Covid 19 has changed all that as it does not differentiate or discriminate.

Communication has taken on a new meaning in these times. Earlier social visiting was the norm, students went to school and college to get educated and one went to office and worked. Today, with social distancing there is more dependence on technology such as Email, WhatsApp, Twitter, Instagram, Facebook, Google Duo, Face Time, Skype and other such devices. What is now evident is that there is need for using technology to improve our communication and stay in touch.

As history has shown, choices made during crises can shape the world for decades to come. The COVID-19 pandemic has been testing the limits of global cooperation. Today developing countries and developed countries have to work together to overcome this challenge.

Choices made now will have far-reaching consequences. Reliance on more of the same is untenable and ignores the scale of human suffering unleashed by the pandemic.

The world after the first wave of COVID-19 must be more inclusive, resilient, and sustainable. Communication is the key. How? In the era of social distancing, online communication has gained importance. The Mobile today is a magical gadget that is not only ubiquitous but helps us in multi tasking if used in the right manner. At the touch of a button we can get in touch with our near and dear ones, work place, business, bank, store and many others besides helping us with data and entertainment. A word of caution, this gadget needs to be used with care and responsibility. Newer versions of the mobile

will emerge but it will also bring the danger of over exposure and over dependence. I know how addicted people are to their mobiles. In fact, the younger generation wonders how we lived without them but at the end of the day, a gadget is only that. It cannot replace relationships, friendship, love, care, concern, compassion which somehow has taken a back seat. I recall a story where a child wished to be reborn as a smart phone so that her parents would have time for her. The forced isolation at home these days has in a way brought families closer and we need to cherish, nurture and strengthen these fragile bonds even when this pandemic is behind us.

The pandemic crisis has accelerated the pace of digital transformation, with further expansion in e-commerce and increases in the pace of adoption of telemedicine, videoconferencing, online teaching etc. Yet in some ways, we have begun practising age old techniques of yoga, greeting, cooking and hygiene and this has been endorsed by experts in the medical field. We need to instil courage, grit and determination and above all patience because, when and how this virus will be eradicated is a moot point. Our Scientists and Researchers are working on discovering a vaccine but it will take time. Our hospitals, doctors, nurses and paramedical staff besides our police and security have all been overburdened yet they carry on doing their duty selflessly. Let us appreciate and salute these Covid Warriors. On the other hand we have tales of selfishness, callousness and negligence but we need to educate and empower the general public rather than create a fear psychosis. Our social media needs to communicate the right information.

The world after COVID-19 is unlikely to return to the world that was.

Life after the pandemic will go on but I think humanity has learnt some lessons from this dark period. It is said that those who do not learn from the mistakes of history are bound to repeat them.

Let us stop destroying the environment for our selfish ends. Let us learn to live in peace and amity. Let us harness the wonderful and awesome power of science and technology for the benefit of mankind and not its destruction.

In a short story, "the Machine Stops' by E.M Forster written way back in 1947, he envisaged a world in which most of the human population has lost the ability to live on the surface of the Earth and is forced to live underground in isolation cells with all bodily and other needs met by the omnipotent global machine. But, one day the machine stops leaving total chaos and destruction behind. The strong message here, is that if we become too dependent on technology, we will lose our humanity. The fate of the human race depends on the technologies we develop. Let us not throw the baby out with the bath water but learn to use technology to better our lives.

Let us not become like the child who when told by his mother that he needs some fresh air and exercise, asks her to send the link.

Therefore let us not let machines rule our lives. Let us revert to our eternal values and learn to live a simple, healthy and harmonious life rather than crave for the superficial, artificial and the synthetic. Let us live in communion with nature rather than in conflict.

The most important lesson from the COVID-19 pandemic is the importance of working together on problems that affect the entire human race. We are much stronger united than divided. The world will then be a far - far better place than it used to be.

# ಕೊಂಕು ಜೀವಿಯ ಮೆಲುಕು –1
# ದೀರ್ಘ ಕಾಲದ ಸಂತೃಪ್ತಿ



ಪ್ರಕಾಶ್ ಶೆಟ್ಟಿ

'ನಾನೀಗ ಪ್ರಜಾವಾಣಿಯಿಂದ ನಿವೃತ್ತಿಯಾಗಿದ್ದೇನೆ' ಎಂದು ಈಚೆಗೆ ಗೆಳೆಯರೊಬ್ಬರಲ್ಲಿ ಹೇಳುತಿದ್ದೆ. ಅವರಿಗೆ ಅಚ್ಚರಿಯೋ ಅಚ್ಚರಿ. ನನ್ನನ್ನು ನೋಡಿದರೆ ನಿವೃತ್ತಿಯಾಗುವಷ್ಟು ವಯಸ್ಸಾ–ದಂತೆ ಕಾಣದೆ ಇರುವುದು ಅವರ ಅಚ್ಚರಿಗೆ ಕಾರಣ ಅಲ್ಲ. ಅವರಿಗೆ ಬೇರೆ ಎರಡು ಕಾರಣಗಳಿದ್ದವು. ಒಂದು, ನಾನು ಇಲ್ಲಿಯವರೆಗೆ 'ಪ್ರಜಾವಾಣಿ' ಕಚೇರಿಗೆ ಹೋಗಿಯೇ ಕೆಲಸ ಮಾಡಬೇಕಾಗಿತ್ತಾ?! ಎಂದು. ಎರಡನೆಯದಾಗಿ, ನಿವೃತ್ತಿ ಹೇಳುತ್ತೀರಿ, 'ಚಿನಕುರಳಿ' ದಿನಾ ಪ್ರಕಟವಾಗುತ್ತಿದೆಯಲ್ಲ?! ಎಂಬ ಪ್ರಶ್ನೆ. ಅವರ ಮೊದಲನೆಯ ಸಂಶಯ ಅನೇಕರಲ್ಲಿದೆ. ಯಾಕೆಂದರೆ ವ್ಯಂಗ್ಯ ಚಿತ್ರ 'ಗೀಚಾಟ' ಸಂಬಳ ಸಿಗುವ ವೃತ್ತಿಯಾಗುವುದಕ್ಕೆ ಸಾಧ್ಯವೇ ಇಲ್ಲ ಎಂಬ ಲೆಕ್ಕಾಚಾರ ಅವರದ್ದು. 'ಇಷ್ಟು ಚಿಕ್ಕ ಕಾರ್ಟೂನ್ ರಚಿಸುವುದಕ್ಕೆ ಇಡೀ ದಿವಸ ಆಫೀಸ್‌ನಲ್ಲಿ ಕೂರಬೇಕೆ?' ಎಂಬ ನಿಗೂಢ ರಹಸ್ಯ ಭೇದಿಸಲು ಮಾತ್ರ ಅವರಿಗೆ ಇನ್ನೂ ಸಾಧ್ಯವಾಗಿಲ್ಲ.




ಎರಡನೆಯದು ನಿವೃತ್ತಿ ಎಂದು ಹೇಳಿ ದಿನಾ 'ಚಿನಕುರಳಿ' ಮಾಡುತ್ತಿದ್ದೇನಲ್ಲ! ನಿಜ, ಕಳೆದ 3 ವರ್ಷಗಳಿಂದ ಅಂತಹದೊಂದು ಅವಕಾಶ ಕೊಟ್ಟದ್ದು 'ಪ್ರಜಾವಾಣಿ'ಯ ದೊಡ್ಡ ಗುಣ. ನಿವೃತ್ತಿಯಾಗಿ ಮನೆಗೆ ಹೋದ ಮೇಲೂ ಪತ್ರಿಕೆಯಲ್ಲಿ ದಿನಾ ಹೆಸರು ಬಂದರೆ ಅದು ಎಲ್ಲರಿಗೂ ಸಿಗುವ ಭಾಗ್ಯ ಅಲ್ಲ. ಆದ್ದರಿಂದಲೇ 'ಗೀಚಾಟ'ವನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಂಡಿದ್ದು ಈ ಹೊತ್ತಿನಲ್ಲಿ ನನಗೆ ಸಾರ್ಥಕ ಅನಿಸುತ್ತಿದೆ. 'ಪ್ರಜಾವಾಣಿ'ಯಂತೆ ಬೇರೆ ಪತ್ರಿಕೆಗಳು ವ್ಯಂಗ್ಯಚಿತ್ರಗಳಿಗೆ ಸ್ಥಾನ ಮಾನ ಕೊಡದೆ ಇರುವುದರಿಂದಲೋ ಏನೋ ವ್ಯಂಗ್ಯಚಿತ್ರಕಾರರ ವೃತ್ತಿಗೆ ಕಡಿವಾಣ ಬಿದ್ದಿದೆ. ಆ ದೃಷ್ಟಿಯಲ್ಲಿ ಒಬ್ಬ ವೃತ್ತಿಪರನಾಗಿ ದೀರ್ಘಕಾಲ ಈ ರಂಗದಲ್ಲಿದ್ದೇನೆ ಎಂದು ನನಗೆ ಅದೇನೋ ಖುಷಿ.

ನಲವತ್ತಾರು ವರ್ಷಗಳ ನಂತರ ಈಗ ನನ್ನ ವ್ಯಂಗ್ಯಚಿತ್ರಗಳನ್ನು ನೋಡುವಾಗ ನಾನೆಲ್ಲಿದ್ದೆ ಎಂಬ ತವಕವಾಗುತ್ತದೆ. ರೇಖೆ ಮತ್ತು ಐಡಿಯಾಗಳಲ್ಲಿ ಅಷ್ಟೊಂದು ಬದಲಾವಣೆಗಳಾಗಿವೆ. ಬಹಳ ಹಿಂದಿನಿಂದ ನಾನು ಬೆಳೆಸಿಕೊಂಡ ಒಂದು ಸ್ವಭಾವ– ಆತ್ಮ ವಿಮರ್ಶೆ. ಡ್ರಾಯಿಂಗ್ ಬೋರ್ಡ್‌ನಿಂದ ಹಿಡಿದು, ಪ್ರಕಟವಾಗುವವರೆಗೂ ನನ್ನ ಅವಲೋಕನ ಮುಂದುವರಿಯುತ್ತಿರುತ್ತದೆ. ಕೆಲವೊಮ್ಮೆ ಪ್ರಕಟಣೆಗೆ ಕಳಿಸಿ ಸುಮ್ಮನೆ ಕುಳಿತಾಗಲೂ! ನನ್ನ ಪ್ರಕಟಿತ ವ್ಯಂಗ್ಯಚಿತ್ರ ನೋಡುವ ಅತೀ ಕುತೂಹಲ 46 ವರ್ಷಗಳ ಹಿಂದೆ ಹೇಗಿತ್ತೋ ಇಂದಿಗೂ ಹಾಗೇ ಇದೆ.

ಈ ಕಾಲಘಟ್ಟದಲ್ಲಿ ಒಂದು ಮಾತು ಹೇಳಲೇಬೇಕು. ಕಾರ್ಟೂನ್ ಬರೆಯುವಾಗ ನನ್ನ ಈಗಿನ ಮನಸ್ಥಿತಿಗೂ, ಸುಮಾರು ಹತ್ತು ವರ್ಷಗಳ ಹಿಂದಿನ ಮನಸ್ಥಿತಿಗೂ ತುಂಬಾ ವ್ಯತ್ಯಾಸ ಇದೆ ಎಂದೆನಿಸುತ್ತದೆ. ಹಿಂದೆ ನನ್ನ ತಲೆಯಲ್ಲಿ ಓಡುತಿದ್ದುದು ಹತೋಟಿಯಿಲ್ಲದ ಕುದುರೆ. ಈಗ ಆ ಕುದುರೆ ಹತೋಟಿಯಲ್ಲಿದೆ. ಇಂದಿನ ಓದುಗರ ಮನಸ್ಥಿತಿಗೆ ಹೊಂದಿಕೊಳ್ಳುವಂತಹ ಮಾರ್ಗಸೂಚಿ ನನ್ನ ಮುಂದಿದೆ. ಐಡಿಯಾಕ್ಕಿಂತ ಹೆಚ್ಚು ವ್ಯಂಗ್ಯಚಿತ್ರ

ಪ್ರಕಟವಾದ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಯೋಚಿಸುತ್ತೇನೆ. ಸಂಪಾದಕರು 'ಇದು ಬೇಡ' ಅನ್ನುವುದಕ್ಕೆ ಆಸ್ಪದ ಕೊಡದಂತೆ ಕಾರ್ಟೂನ್ ರಚಿಸಬೇಕೆಂದು ಎಚ್ಚರಿಕೆ ವಹಿಸುತ್ತೇನೆ. ಇವೆಲ್ಲ ನಾನೇ ಎಳೆದುಕೊಂಡ ಲಕ್ಷ್ಮಣ ರೇಖೆ. (ಆರ್. ಕೆ. ಲಕ್ಷ್ಮಣ್ ಅವರು ಪಾಲಿಸುತ್ತಿದ್ದುದು ಅವರದ್ದೆ ಲಕ್ಷ್ಮಣ ರೇಖೆ ಎಂಬ ಮಾತಿದೆ) ನನ್ನ ಅದೃಷ್ಟಕ್ಕೆ 'ಪ್ರಜಾವಾಣಿ' ಸಮೇತ ನಾನು ಹಿಂದೆ ಕೆಲಸ ಮಾಡಿದ ಯಾವುದೇ ಪತ್ರಿಕೆಗಳು ಕೂಡಾ ಅಪಾಯಿಂಟ್‌ಮೆಂಟ್ ಪತ್ರದಲ್ಲಿ 'ಯಾರ ಮೇಲೆ ಕಾರ್ಟೂನ್ ಬರೆಯಬಾರದು' ಎಂದು ಪಟ್ಟಿ ಕೊಟ್ಟದ್ದಿಲ್ಲ.

ಈ ನಡುವೆ ಮೇಲಿಂದ ಮೇಲೆ ಧುತ್ತೆಂದು ಎದ್ದು ಬರುವ ಗಲೀಜು ರಾಜಕೀಯ, ಭಾರಿ ದೋಚಾಟ (ಭ್ರಷ್ಟಚಾರ ಪದ ತೀರಾ ಚಿಕ್ಕದಾಯಿತು) ದ ಬಗ್ಗೆ ಏನಾದರೂ ಚಾಟಿ ಏಟು ಕೊಡೋಣ ಎಂದು ಹೊರಟರೆ ಎಲ್ಲವೂ 'ರೀ ಪ್ಲೇ' ಆದಂತಾಗುತ್ತದೆ. ಹಿಂದೆ ರಚಿಸಿದ ಕಾರ್ಟೂನ್ ಐಡಿಯಾಗಳು ಮತ್ತೆ ಗಿರಕಿ ಹೊಡೆಯಲಾರಂಭಿಸುತ್ತವೆ. ಅದೇ ಅಸಮಾಧಾನದ ಹೊಗೆ, ಅದೇ ಬಿಕ್ಕಟ್ಟು, ಅದೇ ಭರವಸೆಗಳು, ಅದೇ ಹುಚ್ಚು ಹೇಳಿಕೆಗಳು, ಅದೇ ಸಂಪುಟ ವಿಸ್ತರಣೆಯ ಜಂಜಾಟ, ಅದೇ ಹೆಗ್ಗಣಗಳ ಹಗರಣಗಳು..... ಇಂತಹ ಹಳಸಲು ವಿಷಯಗಳ ಮೇಲೆ ಹೊಸದಾಗಿ ಕಾರ್ಟೂನ್ ಮಾಡುವುದು ಕೂಡಾ ಒಂದು ರೀತಿಯ ಸವಾಲು ಎಂದೇ ನನ್ನ ಭಾವನೆ. ನನ್ನ ಕಾರ್ಟೂನನ್ನು ನಾನೇ ಕೃತಿ ಚೌರ್ಯ ಮಾಡಬಾರದಲ್ಲವೇ! ಆರ್. ಕೆ. ಲಕ್ಷ್ಮಣ್ ಅವರ ಹಳೆಯ ಕಾರ್ಟೂನ್‌ಗಳು ಕೆಲವೊಮ್ಮೆ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಬೇರೆ ರೂಪ ತಾಳಿ ಪ್ರಕಟವಾದದ್ದಿದೆ. ನನ್ನದೂ ಹಾಗಾಗಿರಬಹುದು... ಗೊತ್ತಿಲ್ಲ.

ಇಂದಿನ ರಾಜಕೀಯ ವಿದ್ಯಾಮಾನಗಳು 'ಲೇಟೆಸ್ಟ್' ಆಗಿ ಎಷ್ಟು ಕೊಳಕಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ದಿನಾ ಚಾನೆಲ್, ಪತ್ರಿಕೆಗಳ ಮೊರೆ ಹೋಗುತ್ತೇನೆ. ಹೇಸಿಗೆಯಾಗುತ್ತದೆ. ವಾಕರಿಕೆ ಬರುತ್ತದೆ. ಬೈಯುತ್ತೇನೆ. ಆದರೆ ಗುಟ್ಟಿನ ವಿಷಯ ಏನೆಂದರೆ (ಯಾರಿಗೂ ಹೇಳಬಹುದು) ಡ್ರಾಯಿಂಗ್ ಬೋರ್ಡು ಎದುರು ಕುಳಿತಾಗ, ಇಂತಹ ಹುಚ್ಚಾಟಗಳು ನಡೆಯುತ್ತಲೇ ಇರಲಿ ಎಂದು ಬಯಸುತ್ತೇನೆ !

# ಹೊಸತನದ ಹೊಂಬೆಳಕು

ರವಿಯ ಹೊಂಗಿರಣವು ಚೇತನವಾಗಿ
ಹರಿಯಲಿ ನಿತ್ಯ ನಿರಂತರ .!
ಯಾವ ಗಂಡಾಂತರವಿಲ್ಲದೆ
ಬದುಕಿನ ದೋಣಿ ಸಾಗಲಿ ..!
ಭರಪೂರ ಭರವಸೆಯು ಎಲ್ಲರ
ಬಾಳಲ್ಲಿ ಬೆಳಕಾಗಿ ಬರಲಿ .!
ಮೈ ಮನವು ಹಸಿರಾಗಿ
ಆತ್ಮವಿಶ್ವಾಸದ ಹೊಸತೋರಣ ಕಟ್ಟಿ
ಎಲ್ಲರಲ್ಲೂ ಮತ್ತೆ ನವಚೇತನ ತರಲಿ .!
ನವಯುಗವಾಗಲಿ ಮುಂದಿನ ದಿನಗಳು .!


ಎಲ್ಲಿಯೋ ಹುಟ್ಟಿ ಎಲ್ಲೆಲ್ಲಿಗೋ ಚಲಿಸಿ .,
ಎಲ್ಲರಲ್ಲೂ ನಡುಕ ಬರಿಸಿ,
ಮೈಮನವ ಚಂಚಲಗೊಳಿಸಿ,
ಬದುಕಿನ ಸಾರವನ್ನು ಕಳೆದುಕೊಂಡು,
ನಮ್ಮವರ ಒಲವನ್ನು ಕಸಿದುಕೊಂಡು,
ಬದುಕಿದ್ದು ಸತ್ತಂತಾದ ದಿನಗಳು ಕರಗಲಿ .!
ಕಳೆಯಲಿ ಕಷ್ಟಕಾರ್ಪಣ್ಯಗಳು ದೃಷ್ಟಿತೆಗೆದಂತೆ .!
ವಿಕೋಪದ ಮುನಿಸು ಕಳೆದು
ಮೈಮನವು ಮತ್ತೆ ಹೊಸ ಹುರುಪಿನಿಂದ
ಬಾಳಿಗೆ ಚೈತನ್ಯ ತುಂಬಿಸಿ ಹರುಷದಿ ಸಾಗಲಿ .!

ಯಾವ ದೇವರ ಶಾಪ ತಟ್ಟಿತೋ
ಯಾರ ಕಣ್ಣಿನ ದೃಷ್ಟಿ ತಗಲಿತೋ .!
ಇಲ್ಲಿ ಅತಿಯಾದ ಅಮೃತವೂ ವಿಷವೆಂಬಂತೆ
ವಿಷಮ ಘಳಿಗೆಯಾಗಿ
ಎಲ್ಲರ ಬದುಕನ್ನು ಛಿದ್ರಗೊಳಿಸಿತೋ ..?
ಕಟ್ಟಿದ್ದ ಕನಸಿನ ಗೋಪುರಗಳು
ಕಟ್ಟೆಯೊಡೆದು ಕಣ್ಣೀರಾಗಿ ಸುರಿದು
ವಿಶ್ವವೆಲ್ಲಾ ಕೋಲಾಹಲವಾದ
ಕಹಿಯು ಕಳೆದು ಬದುಕಿನ ಖುಷಿಯ
ದಿನಗಳು ಮತ್ತೆ ಮರುಕಳಿಸಲಿ ..!

ಕನಸುಗಳ ನನಸಾಗಿಸಲು ಮನಮನಗಳು
ಒಂದಾಗಿ ಟೊಂಕಕಟ್ಟಿ ನಿಲ್ಲಲಿ .!
ಜೊತೆಗೆ ಬೆಸೆಯಲಿ ಮಮತೆ
ಬಾಂಧವ್ಯದ ಬೆಸುಗೆ.!
ಬದುಕಿನ ಉಯ್ಯಾಲೆಯು
ದೃಢತೆಯೊಂದಿಗೆ ತೂಗುತ್ತಿರಲಿ .!
ಎನೇ ಬರಲಿ ಎದುರಿಸುವ ಛಲಬರಲಿ .!
ಚಂದದ ಬದುಕು ಹಸಿರಾಗಿ ಬರಲಿ
ಪ್ರಭುವಿನ ಕೃಪೆಯೊಂದಿರಲಿ ..!

ಜಯಲಕ್ಷ್ಮಿ. ಸಿ .ಶೆಟ್ಟಿ.

# ಕಾರ್ಗಿಲ್ ದಿನಗಳ ಆ ರಾತ್ರಿ .....



ಜಗದೀಶ್ ಹೆಗ್ಡೆ

ಈಗ ನಾನು ಬಹು ರಾಷ್ಟ್ರೀಯ ಸಂಸ್ಥೆಯೊಂದರಲ್ಲಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥನಾಗಿ ಮತ್ತು ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ ಆದರೆ, ನನ್ನ ವೃತ್ತಿ ಜೀವನ ಆರಂಭಿಸಿದ್ದು 1986 ರಲ್ಲಿ ಭಾರತೀಯ ವಾಯು ಸೇನೆಯಲ್ಲಿ ತಂತ್ರಜ್ಞನಾಗಿ. ನನ್ನ ವಾಯುಸೇನೆಯ ವೃತ್ತಿಯ ಆರಂಭದಿಂದಲೂ ದೇಶವು ಯುದ್ಧ ಮಾಡಬೇಕೆಂದು ಬಯಸಿರದಿದ್ದರು, ಅಕಸ್ಮಾತ್ ಯುದ್ದವೇನಾದರೂ ಆದರೆ ನಾನಾಗ ಮುಂಚೂಣಿಯಲ್ಲಿ ನನ್ನ ಅಳಿಲು ಸೇವೆಯನ್ನು ದೇಶಕ್ಕೆ ಸಮರ್ಪಿಸ ಬೇಕೆಂದು ಹಾತೊರೆಯುತ್ತಿದ್ದೆ.

1986 ರಿಂದ 2000 ದ ವರೆಗೆ ಪಾಪಿ ಪಾಕಿಸ್ತಾನ ಮತ್ತು ನಮ್ಮ ದೇಶದ ನಡುವೆ ಸಾಕಷ್ಟು ಬಂಡಾಯ ಸಂಘರ್ಷದ ಪರಿಸ್ಥಿತಿ ಉಂಟಾಗಿದ್ದರೂ, ನನಗೆ ಗಡಿ ಪ್ರದೇಶಕ್ಕೆ ಹೋಗಲು ಅವಕಾಶ ಸಿಕ್ಕಿರಲಿಲ್ಲ. ಈ ಮಧ್ಯದಲ್ಲಿ ನನ್ನ ಮಡದಿ ಬಬಿತಾ ನನ್ನ ಜೀವನದಲ್ಲಿ ಪ್ರವೇಶಿಸಿ ನಮ್ಮ ಪ್ರೇಮದ ಫಲವಾಗಿ ಐಶ್ವರ್ಯಳು 1998 ರಲ್ಲಿ ನಮ್ಮ ಜೀವನದಲ್ಲಿ ಆಗಮಿಸಿದ್ದಳು. ಈ ಸಂದರ್ಭದಲ್ಲಿ ನನಗೆ ವಾಯುಸೇನೆಯು ಬೋಧಕನಾಗಿ ಬಡ್ತಿ ಕೊಟ್ಟು, ಬೆಳಗಾಂನ ವಾಯುಸೇನೆಯ ತರಬೇತಿ ಸಂಸ್ಥೆಗೆ ವರ್ಗಾವಣೆ ಮಾಡಿಬಿಟ್ಟಿತ್ತು.

ಮೇ – ಜೂನ್ 1998 ದಿನಗಳು, ಗಡಿ ಪ್ರದೇಶದಲ್ಲಿ ಹಿಮಪಾತವು ಕರಗಿದಾಗ ಶತ್ರುಗಳ ಶಿಬಿರವು ನಮ್ಮ ನೆಲದಲ್ಲಿ ಗೋಚರವಾಗಿ ದೇಶಾದ್ಯಂತ "ಕಾರ್ಗಿಲ್" ವಿಷಯವು ಮನೆಮಾತಾಗಿ ಬಿಟ್ಟಿತ್ತು. ಇದೇ ಸಂದರ್ಭದಲ್ಲಿ ವಾಯುಸೇನೆಯ ಮುಖ್ಯ ಕಾರ್ಯಾಲಯ ದೆಹಲಿಯಿಂದ ನನಗೆ ಬುಲಾವ್ ಬಂದಿತು. ಮಡದಿಯ ಭಯದ ಕಣ್ಣಿಗೆ ಸಾಂತ್ವನ ನೀಡಿ, ಬೆಳಗಾಂನಿಂದ ಗುಪ್ತ ಗಡಿ ಪ್ರದೇಶಕ್ಕೆ ನನ್ನ ಸೂಟ್ ಕೇಸ್ ಹಿಡಿದು ರೈಲು ಹತ್ತಿಯೇ ಬಿಟ್ಟೆ.



ಕಾರ್ಗಿಲ್ ಸಂಘರ್ಷವಾದರೂ ಸಹ ಮಿಲಿಟರಿ ಕಾರ್ಯಾಚರಣೆಯು ಗಡಿ ಪ್ರದೇಶದದುದ್ದಕ್ಕೂ ಸಕ್ರಿಯವಾಗಿರುತ್ತದೆ. ಗೌಪ್ಯತೆಯ ಕಾರಣದಿಂದ ನಾನು ಹೋಗುವ ಯುದ್ಧ ಕಾರ್ಯಾಚರಣೆ ಸ್ಥಳ ಸಹಜವಾಗಿ ನನಗೆ ಗೊತ್ತಿರಲಿಲ್ಲ. ಹಲವಾರು ವಾಯುನೆಲೆಗಳ ಮುಖಾಂತರ ನನ್ನ ನಿರ್ದಿಷ್ಟವಾದ ಸ್ಥಳ "ರನ್ ಆಫ್ ಕಚ್" (ಭುಜ್, ಗುಜರಾತ್ – ಭಾರತ–ಪಾಕಿಸ್ತಾನ ಗಡಿ ಪ್ರದೇಶ) ತಲುಪಿದೆ. ಅದು ಒಂದು ವಾಯು ಸೇನೆಯ ಸಾಗಿಸಬಹುದಾದ ರೇಡಾರ್ ಯೂನಿಟ್ ಆಗಿತ್ತು. ಹೋದ ದಿನವೇ ಪೂರ್ತಿ ಮುತುವರ್ಜಿಯಿಂದ ಕೆಲಸದಲ್ಲಿ ತೊಡಗಿಸಿಕೊಂಡೆ. ನಮಗೆಲ್ಲ ನಮ್ಮ ಕಾರ್ಯಾಚರಣೆ ಸ್ಥಳವನ್ನು ಯಾರಿಗೂ ಹೇಳಬಾರದೆಂದು ಕಟ್ಟಪ್ಪಣೆಯಾಗಿತ್ತು ಮತ್ತು ಆ ದಿನಗಳಲ್ಲಿ ಮೊಬೈಲ್ ಫೋನ್ ಇರಲಿಲ್ಲ, ಆದರೆ ನಮ್ಮ ಯೂನಿಟ್ ನಲ್ಲಿದ್ದ ಒಂದು ರಹಸ್ಯ ಲ್ಯಾಂಡ್ ಲೈನ್ ಫೋನ್ನನ್ನು ಬಹಳ ವಿವೇಚನೆಯಿಂದ ಬಳಸುತ್ತಿದ್ದೆವು ಮತ್ತು ನಾವು ಯಾರೂ ನಮ್ಮ ರಹಸ್ಯ ಸ್ಥಳವನ್ನು ಯಾರಿಗೂ ಹೇಳುತ್ತಿರಲಿಲ್ಲ. ಸಾಗಿಸಬಹುದಾದ ರೇಡಾರ್ ಒಂದು ದೊಡ್ಡ ಟ್ರಕ್‌ನ ಮೇಲೆ ಆರೋಹಿತವಾಗಿತ್ತು ಮತ್ತು ನಮ್ಮೆಲ್ಲ ಬಿಡಾರ ಅದರ ಪಕ್ಕದಲ್ಲೇ ಹಾಕಿದ್ದ ಟೆಂಟ್‌ಗಳಲ್ಲಿತ್ತು. ವಾಯುದಾಳಿಯು ನಿರಂತರವಾಗಿ ನಡೆಯುತ್ತಿತ್ತು, ನಾವೆಲ್ಲಾ ನಮ್ಮ ಕೆಲಸದಲ್ಲಿ ನಿರತವಾಗಿದ್ದೆವು. ಅಲ್ಲೊಂದು ನೀರಿನ ಟ್ಯಾಂಕ್ ಮತ್ತು ಕೊಳಾಯಿ ಇತ್ತು ಹಾಗೂ ಸುತ್ತ ಮುತ್ತಲಿನ ಎಲ್ಲಾ ಹಳ್ಳಿಯವರು ದೂರದಿಂದ ಅಲ್ಲಿಗೆ ನೀರು ಕೊಂಡೊಯ್ಯಲು ಬರುತ್ತಿದ್ದರು. ಈಗಿನ ಹಾಗೆ ಆಗ ಅಲ್ಲಿನ ಗಡಿ ಭಾಗದಲ್ಲಿ ಪೂರ್ಣ ಪ್ರಮಾಣದ ಬೇಲಿ ಇರಲಿಲ್ಲ.

ಆ ರಾತ್ರಿ .... ನನ್ನ ಜೀವನದಲ್ಲಿ ಅದು ಮರೆಯಲಾಗದ ರಾತ್ರಿ! ಅಂದು ನಮ್ಮ ವಿರಾಮದ ದಿನವಾಗಿದ್ದರಿಂದ ನಮ್ಮ ರೇಡಾರ್ ಆಫ್ ಮಾಡಿದ್ದೆವು. ಹಾಗಾಗಿ ಮಧ್ಯ ರಾತ್ರಿ ನಮ್ಮ ಎಲ್ಲಾ ಸಹೋದ್ಯೋಗಿಗಳು ತಮ್ಮ ತಮ್ಮ ಟೆಂಟ್ ಗಳಲ್ಲಿ ವಿಶ್ರಮಿಸುತ್ತಿದರು. ನಾನು ತುರ್ತು ನೈಸರ್ಗಿಕ ಕರೆಗಾಗಿ ನನ್ನ ಟೆಂಟ್‌ನಿಂದ ಹೊರಗೆ ಬಂದೆ, ಎಲ್ಲೆಲ್ಲೂ ನೀರವ ಮೌನ, ಎಲ್ಲೋ ನಾಯಿ ಬೊಗಳುತ್ತಿತ್ತು, ಗೂಬೆಯೋ ಅಥವಾ ಯಾವುದೋ ವಿಚಿತ್ರವಾದ ಪ್ರಾಣಿಯ ಕಿರುಚಾಟ ದೂರದಿಂದ ಕೇಳಿಸುತ್ತಿತ್ತು! ಸ್ವಲ್ಪ ಮಟ್ಟಿಗೆ ಭಯ ಹುಟ್ಟಿಸುವ ವಾತಾವರಣ. ನಾನು ನಿಧಾನವಾಗಿ ಯುದ್ಧನೆಲೆ ಶೌಚಾಲಯದತ್ತ (field toilet) ನಡೆದೆ, ಆಗ ಅಲ್ಲಿನ ನೀರಿನ ಕೊಳಾಯಿ ಹತ್ತಿರ ನಿಂತಿದ್ದ ಅಜಾನುಬಾಹು ವ್ಯಕ್ತಿ ನನ್ನ ಗಮನ ಸೆಳೆದ. ಆತ 7 ಅಡಿ ಎತ್ತರವಿದ್ದ, ಉದ್ದದ ಗಡ್ಡ, ಹಸಿರು ಬಣ್ಣದ ಕುರ್ತಾ, ಪೈಜಾಮಾ ಮತ್ತು ದೊಡ್ಡ ಪೇಟಾಧಾರಿಯೊಬ್ಬ ತನ್ನ ಭುಜದಲ್ಲಿ ಬಂದೂಕನ್ನು ಸಿಕ್ಕಿಸಿಕೊಂಡು ನೀರಿನ ಕೊಳಾಯಿಯಲ್ಲಿ ನೀರನ್ನು ತುಂಬಿಸುತ್ತಿದ್ದ! ನೋಡಲು ಆತಂಕವಾದಿ ಹಾಗೆಯೇ ಕಂಡ ನನಗೆ, ಆ ಕ್ಷಣದಲ್ಲಿ ಹೃದಯವೇ ಬಾಯಿಗೆ ಬಂದಂತಾಗಿತ್ತು! ನನಗೆ ಆಗ ನನ್ನ ಟೆಂಟಿನಿಂದ ಹೊರಬಂದ ಕಾರಣವೇ ಮರೆತುಹೋಗಿತ್ತು. ನಿಧಾನವಾಗಿ ವಾಪಸ್ಸು ನನ್ನ ಟೆಂಟ್‌ಗೆ ತಿರುಗಿ ಬಂದು ಸದ್ದಿಲ್ಲದೇ ಮಲಗಿಕೊಂಡೆ, ಆ ನಂತರ ಆ ರಾತ್ರಿಯಿಡಿ ನನಗೆ ನಿದ್ರೆಯೇ ಬರಲಿಲ್ಲ. ಮಾರನೆ ಮುಂಜಾನೆ ಎದ್ದು ನೇರವಾಗಿ ನಮ್ಮ ಯೂನಿಟ್ ಕಮಾಂಡರ್ ಶ್ರೀ ದಾಸ್‌ರವರ ಬಳಿ ನಡೆದ ಸಂಗತಿಯನ್ನು ವಿವರಿಸಿದೆ. ಆಗ ಅವರು ಆಶ್ಚರ್ಯಕರವಾದ, ನನಗರಿಯದ ವಿಷಯವನ್ನು ಹೇಳಿದರು. "ಅದು ಪಾಕಿಸ್ತಾನದ ಗಡಿ ಪ್ರದೇಶವಾಗಿರುವುದರಿಂದ, ಈಗಿನ ಹಾಗೆ ಆಗ ಅಲ್ಲಿನ ಗಡಿ ಭಾಗದಲ್ಲಿ ಪೂರ್ಣ ಪ್ರಮಾಣದ ಬೇಲಿ ಇರಲಿಲ್ಲ ಹಾಗಾಗಿ ಕೆಲವೊಮ್ಮೆ ರಾತ್ರಿ ವೇಳೆಯಲ್ಲಿ ಪಾಪಿ ಪಾಕಿಸ್ತಾನದ ಗಡಿ ಪ್ರದೇಶದ ವಾಸಿಗಳು ನೀರು ಕೊಂಡೊಯ್ಯಲು ಬಿಡಾರದ ಬಳಿ ಬರುತ್ತಿದ್ದದು ಸಾಮಾನ್ಯ" (ಆಶ್ಚರ್ಯವಾದರು ನಿಜ!!!).

ಇತ್ತ ಬೆಳಗಾಂನ ವಾಯುಸೇನೆಯ ತರಬೇತಿ ಸಂಸ್ಥೆಯಲ್ಲಿ, 3000+ ಹೊಸ ನೇಮಕಾತಿಗಳು ಸೇರಿದ್ದರು ಹಾಗೂ ಹೆಚ್ಚಿನ ಬೋಧಕರು ಗಡಿ ಪ್ರದೇಶದ ಕಾರ್ಯಾಚರಣೆಯಲ್ಲಿದ್ದಿದ್ದರಿಂದ, ತರಬೇತಿ ಸಂಸ್ಥೆಯು ಬೋಧಕರ ತೀವ್ರ ಕೊರತೆ ಅನುಭವಿಸುತ್ತಿತ್ತು. ಈ ಸಂದರ್ಭದಲ್ಲಿ ಭಾರತೀಯ ವಾಯು ಸೇನೆಯ ಮುಖ್ಯಾಲಯದಿಂದ ನನಗೆ ತಿರುಗಿ ಬೆಳಗಾಂಗೆ ಹೋಗಲು ಚಲನೆಯ ಆದೇಶ ಹೊರಡಿಸಿತು. ಹೀಗೆ ಯುದ್ಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡರೂ ಸಹ ಅದರ ವಿಜಯದ ರುಚಿಯನ್ನು ಸಂಭ್ರಮಿಸುವ ಮೊದಲೇ ಯುದ್ಧಭೂಮಿಯನ್ನು ಬಿಟ್ಟು ಭಾರ ಹೃದಯದಿಂದ ಕರ್ತವ್ಯದ ಆಜ್ಞೆಯನ್ನು ಪಾಲಿಸಿದೆ. ಆದರೆ "ಆ ರಾತ್ರಿ ಆದ ಅನುಭವವನ್ನು ನೆನೆಸಿಕೊಂಡರೆ ಮೈ ಜುಮ್ಮೆನ್ನುತ್ತದೆ ಮತ್ತು ಭಯವನ್ನು ವರ್ಣಿಸಲು ಈಗಲೂ ಸಾಧ್ಯವಾಗುತ್ತಿಲ್ಲ !!!"

ಚಿತ್ರ ಕೃಪೆ: ನನ್ನ ಸ್ನೇಹಿತರಾದ ಶ್ರೀ ಪ್ರಕಾಶ ಶೆಟ್ಟಿಯವರಿಗೆ ಧನ್ಯವಾದಗಳು.

# ಅಭಿನಂದನೆಗಳು


## ಡಾ. ಮಾಲತಿ ಶೆಟ್ಟಿ ಮಾಣೂರುರವರು "ರಾಷ್ಟ್ರೀಯ ಕಣ್ಮಣಿ "ರಾಷ್ಟ್ರ ಪ್ರಶಸ್ತಿ"ಗೆ ಆಯ್ಕೆ



ಅಮೃತ ಪ್ರಕಾಶ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ, ಸಾಹಿತಿ, ಸಮಾಜ ಸೇವಕಿ ಡಾ. ಮಾಲತಿ ಶೆಟ್ಟಿ ಮಾಣೂರುರವರು ಬೆಂಗಳೂರಿನ ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ನೀಡುವ "ರಾಷ್ಟ್ರೀಯ ಕಣ್ಮಣಿ" ರಾಷ್ಟ್ರ ಪ್ರಶಸ್ತಿಗೆ ಪತ್ರಿಕೋದ್ಯಮ ಕ್ಷೇತ್ರದ ಸಾಧನೆಗಾಗಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ಪ್ರಧಾನ ಸಮಾರಂಭವು ಸೆಪ್ಟೆಂಬರ್ 25 ರಂದು ಬೆಂಗಳೂರಿನಲ್ಲಿ ಸಂಸ್ಥೆಯ 29 ನೇ ವಾರ್ಷಿಕೋತ್ಸವದ ಸಮಾರಂಭದ ವೇಳೆ ಗಣ್ಯರ ಸಮ್ಮುಖದಲ್ಲಿ ನಡೆಯಿತು. ಡಾ॥ ಮಾಲತಿ ಶೆಟ್ಟಿಯವರಿಗೆ 2018ರಲ್ಲಿ ಗೌರವ ಡಾಕ್ಟರೇಟ್ ಪ್ರಾಪ್ತವಾಗಿದ್ದು, ಇತರ ಅನೇಕ ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ. ಬೆಂಗಳೂರು ಬಂಟರ ಸಂಘದ ಪರವಾಗಿ ಇವರಿಗೆ ಅಭಿನಂದನೆಗಳು.

## ಅಭಿನಂದನೆಗಳು



ಶ್ರೀ ಚಂದನ್‌ಕುಮಾರ್ ಹೆಗ್ಡೆ




ಶ್ರೀ ಸುನೀಲ್ ಭಂಡಾರಿ

ಕರ್ನಾಟಕ ರಾಜ್ಯ ಸನ್ನದು ಲೆಕ್ಕ ಪರಿಶೋಧಕರ ಸಂಘದ 2021-22ನೇ ಸಾಲಿನ ಅಧ್ಯಕ್ಷರಾಗಿ **ಶ್ರೀ ಚಂದನ್‌ಕುಮಾರ್ ಹೆಗ್ಡೆ**ಯವರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡ **ಶ್ರೀ ಸುನೀಲ್ ಭಂಡಾರಿ**ಯವರಿಗೆ ಹೃತ್ಪೂರ್ವಕ ಅಭಿನಂದನೆಗಳು. ತಮ್ಮ ವೃತ್ತಿ ಜೀವನದಲ್ಲಿ ಇನ್ನೂ ಅನೇಕ ಸಾಧನೆಯ ಗರಿಗಳು ತಮ್ಮ ಮುಡಿಗೇರಲಿ ಎಂದು ಆಶಿಸುವ,

**ಶ್ರೀ ದೀಪಕ್ ಶೆಟ್ಟಿ, ಖಜಾಂಚಿ**

## ಅಭಿನಂದನೆಗಳು



ಶ್ರೀ ಚಂದನ್‌ಕುಮಾರ್ ಹೆಗ್ಡೆ



ಶ್ರೀ ಸುನೀಲ್ ಭಂಡಾರಿ

ಕರ್ನಾಟಕ ರಾಜ್ಯ ಸನ್ನದು ಲೆಕ್ಕ ಪರಿಶೋಧಕರ ಸಂಘದ 2021-22ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆಗೊಂಡ **ಶ್ರೀ ಚಂದನ್ ಕುಮಾರ್ ಹೆಗ್ಡೆ**ಯವರಿಗೆ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡ **ಶ್ರೀ ಸುನೀಲ್ ಭಂಡಾರಿ** ಯವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಾ, ತಮ್ಮ ಮುಂದಿನ ಸಾಧನೆ ನೂರಾರು ಯುವಕರಿಗೆ ಸ್ಫೂರ್ತಿಯಾಗಲಿ ಎಂದು ಆಶಿಸುವ,

**ಶ್ರೀ ಬಿ. ಆನಂದರಾಮ ಶೆಟ್ಟಿ**

**ಶ್ರೀ ಅಮರನಾಥ ಶೆಟ್ಟಿ, ಮಂದಾರ್ತಿ**

ADVT.

ಸ್ನೇಹ ಚಿಂತನೆ ಅಕ್ಟೋಬರ್ 2021




ADVT.

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಕಾಪು ದಿವಾಕರ ಶೆಟ್ಟಿ**
ಮಾಜಿ ಅಧ್ಯಕ್ಷರು,
ಬಂಟರ ಸಂಘ ಬೆಂಗಳೂರು
ನಿಧನ: 11.08.2021

ಬೆಂಗಳೂರು ಬಂಟರ ಸಂಘದ
ಮಾಜಿ ಅಧ್ಯಕ್ಷರು, ವಿಜಯಾ ಬ್ಯಾಂಕ್‌ನ
ನಿವೃತ್ತ ಅಧಿಕಾರಿ
ಶ್ರೀ ಕಾಪು ದಿವಾಕರ ಶೆಟ್ಟಿಯವರ
ನಿಧನವು ಸಮುದಾಯಕ್ಕೆ ತುಂಬಲಾರದ ನಷ್ಟ.
ಮೃತರ ಆತ್ಮಕ್ಕೆ ಚಿರಶಾಂತಿ ಕೋರುವ,

**ಶ್ರೀ ದೀಪಕ್ ಶೆಟ್ಟಿ, ಖಜಾಂಚಿ**

## ಭಾವಪೂರ್ಣ ಶ್ರದ್ಧಾಂಜಲಿ

ನಮ್ಮೆಲ್ಲರ ಮಾರ್ಗದರ್ಶಕರು, ಸಮುದಾಯದ
ಬಗ್ಗೆ ಅಪಾರ ಅಭಿಮಾನ ಹೊಂದಿದ್ದ, ಬೆಂಗಳೂರು
ಬಂಟರ ಸಂಘದ ಮಾಜಿ ಅಧ್ಯಕ್ಷರು ಹಾಗೂ
ವಿಜಯಾ ಬ್ಯಾಂಕ್‌ನ ನಿವೃತ್ತ ಅಧಿಕಾರಿ
ಶ್ರೀ ಕಾಪು ದಿವಾಕರ ಶೆಟ್ಟಿಯವರ ನಿಧನವು
ಸಮುದಾಯಕ್ಕೆ ತುಂಬಲಾರದ ನಷ್ಟ.
ಮೃತರ ಆತ್ಮಕ್ಕೆ ಚಿರಶಾಂತಿ ಕೋರುವ,

**ಶ್ರೀ ಬಿ. ಆನಂದರಾಮ ಶೆಟ್ಟಿ**
**ಶ್ರೀ ಅಮರನಾಥ ಶೆಟ್ಟಿ, ಮಂದಾರ್ತಿ**



**ಶ್ರೀ ಕಾಪು ದಿವಾಕರ ಶೆಟ್ಟಿ**
ಮಾಜಿ ಅಧ್ಯಕ್ಷರು,
ಬಂಟರ ಸಂಘ ಬೆಂಗಳೂರು
ನಿಧನ: 11.08.2021

ADVT.

# ನೈತಿಕ ಮೌಲ್ಯ ಮತ್ತು ಕುಟುಂಬ



ದೀಪಿಕಾ ಶಿವಕುಮಾರ್ ಶೆಟ್ಟಿ

ಮನೆಯೇ ಮೊದಲ ಪಾಠ ಶಾಲೆ ಎಂಬಂತೆ ಕುಟುಂಬವು ಮಗುವಿಗೆ ಸಮಾಜೀಕರಣದ ಮೊದಲ ಜಾಗವಾಗಿದ್ದು, ಮೊದಲ ಶಾಲೆಯಂತೆ ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ಮಕ್ಕಳಿಗೆ ಮೌಲ್ಯಗಳನ್ನು ತಿಳಿಸುವಲ್ಲಿ ವಿಶೇಷ ಪಾತ್ರವನ್ನು ಅದು ನಿಭಾಯಿಸುತ್ತದೆ. ಮಕ್ಕಳು ತಮ್ಮ ಬಹುಪಾಲು ಸಮಯವನ್ನು ಮನೆಯವರೊಂದಿಗೆ ಕಳೆಯುವುದರಿಂದ ಮೌಲ್ಯಗಳನ್ನು ಬೆಳೆಸುವಲ್ಲಿ ಕುಟುಂಬದ ಪಾತ್ರ ಹಿರಿದಾಗಿದೆ. ಮೌಲ್ಯಗಳೆಂದರೆ ನಮ್ಮನ್ನು ಸಮಾಜದಲ್ಲಿ ನೈತಿಕವಾಗಿ ನಡೆದುಕೊಳ್ಳುವಂತೆ ಮಾರ್ಗದರ್ಶಿಸುವ ಆದರ್ಶಗಳು. ಮೌಲ್ಯಗಳನ್ನು ಬಾಲ್ಯದ ಹಂತದಲ್ಲಿ ಬಹಳ ಪರಿಣಾಮಕಾರಿಯಾಗಿ ತಿಳಿಹೇಳಬಹುದು, ಯಾಕೆಂದರೆ ಮಕ್ಕಳು ಹಸಿ ಮಣ್ಣಿನಂತೆ. ಹಾಗಾಗಿ ಹೇಗೆ ಬೇಕೋ ಹಾಗೆ ಅಚ್ಚು ಹಾಕಬಹುದು.

ಮಗುವನ್ನು ಬೆಳೆಸುವ ವಿಧಾನ ಮತ್ತು ರೀತಿಗಳು ಕೆಲವು ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸುತ್ತವೆ. ತಂದೆ–ತಾಯಿಯ ಸ್ಪರ್ಶ ಸ್ಪಂದನೆಯನ್ನು ಪಡೆದ ಮಕ್ಕಳು ಭಾವನಾತ್ಮಕವಾಗಿ ದೃಢವಾಗಿಯೂ, ಸಹಾನುಭೂತಿಯುಳ್ಳವರೂ, ಶಾಂತ ಮತ್ತು ನಿಯಂತ್ರಿತ ಸ್ವಭಾವದವರೂ ಆಗಿರುತ್ತಾರೆ ಎಂದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಮೊದಲು ಮಕ್ಕಳು ಮನೆಯಲ್ಲಿ ನಡೆಯುವುದನ್ನು ವೀಕ್ಷಿಸಿ. ಅವುಗಳನ್ನು ಸಹಜವಾದ ಮತ್ತು ನೈತಿಕವಾಗಿ ಸರಿಯಾದ ವರ್ತನೆ ಎಂದು ನೋಡಲು ಹಾಗೂ ಅನುಸರಿಸಲು ಆರಂಭಿಸುತ್ತಾರೆ. ತಮ್ಮ ತಂದೆ–ತಾಯಿಯನ್ನು ಆದರ್ಶ ವ್ಯಕ್ತಿಗಳಂತೆ ಕಾಣುತ್ತಾರೆ ಹಾಗೂ ಅವರು ತಮ್ಮ ಹಿರಿಯರ ವರ್ತನೆಯನ್ನು ಅನುಸರಿಸುತ್ತಾರೆ. ಹಾಗಾಗಿ ತಂದೆ–ತಾಯಿ ಹಾಗೂ ಮನೆಯ ಹಿರಿಯರು ಉತ್ತಮ ನೈತಿಕ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಪಾಲಿಸುತ್ತಾರೆ. ಮಕ್ಕಳು ಅದೇ ಮಾರ್ಗದಲ್ಲಿ ಸಾಗುತ್ತಾರೆ. ಇಲ್ಲದೇ ಹೋದರೆ ಅನ್ಯ ಮಾರ್ಗಗಳನ್ನು ಹಿಡಿಯುತ್ತಾರೆ.

ಕುಟುಂಬವು ಅನುಸರಿಸುವ ಹಲವಾರು ರೂಢಿಯ ಅಭ್ಯಾಸಗಳನ್ನು ಮಕ್ಕಳು ಯಾವಾಗಲೂ ಪಾಲಿಸುತ್ತಾರೆ. ನಿಯಮಿತ ಮತ್ತು ಪುನಾರಾವರ್ತಿತ ಲಕ್ಷಣಗಳಿಂದಾಗಿ ಮಕ್ಕಳ ಪಾಲಿಗೆ ಮೌಲ್ಯಗಳಾಗುತ್ತವೆ. ಉದಾಹರಣೆಗೆ ಮನೆಯಿಂದ ಹೊರಡುವ ಮುನ್ನ ಹಿರಿಯರ ಕಾಲು ಮುಟ್ಟಿ ನಮಸ್ಕರಿಸುವ ರೂಢಿ, ವಯಸ್ಸಿನಲ್ಲಿ ದೊಡ್ಡವರಿಗೆ ನೀಡುವ ಗೌರವ, ಉತ್ತಮ ಜೀವನ ಸಂಸ್ಕಾರ ಇತ್ಯಾದಿ. ಪ್ರಾರ್ಥನೆ, ಮಲಗುವ ವೇಳೆ ಕಥೆ ಹೇಳುವುದು, ನಿಜ ಜೀವನದ ಘಟನೆಗಳನ್ನು ಹೇಳುವುದರ ಮೂಲಕ ತಮ್ಮ ಮಕ್ಕಳಿಗೆ ಜೀವನದ ಪಾಠಗಳನ್ನು ಕಲಿಸಲು ಪಾಲಕರು ವಿಶೇಷವಾಗಿ ಪ್ರಯತ್ನಿಸಬೇಕು. ಬೋಧನೆಗಳು ಮಕ್ಕಳ ಮೇಲೆ ಶಾಶ್ವತ ಪರಿಣಾಮವನ್ನು ಬೀರಿ ಕೆಲವು ಮೌಲ್ಯಗಳನ್ನು ತಿಳಿಸುತ್ತವೆ. ಉದಾಹರಣೆಗೆ ರಾಮಾಯಣದ ಕಥೆಗಳನ್ನು ಹೇಳುವುದರ ಮೂಲಕ ರಾಮನ ಆದರ್ಶ ವ್ಯಕ್ತಿತ್ವ, ಹಿರಿಯರಿಗೆ ಕೊಡುವ ಗೌರವ, ಗುರುವಿಗೆ ನೀಡುವ ಗೌರವ, ಸಹೋದರ ಪ್ರೇಮ, ಪ್ರಜಾಪರಿಪಾಲನೆ, ಸೌಜನ್ಯ, ಸ್ನೇಹ ಪರತೆಗಳಂತಹ ಮೌಲ್ಯಗಳನ್ನು ಬೆಳೆಸಬಹುದು. ಹೀಗೆ ಚಿಕ್ಕ ಮಕ್ಕಳಿಗೆ ಜೀವನದ ಆದರ್ಶ ಮೌಲ್ಯಗಳನ್ನು ತಿಳಿಹೇಳಿ ಅವರನ್ನು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗುವಂತೆ ರೂಪಿಸಬಹುದು.

## ಅಭಿನಂದನೆಗಳು

ಕರ್ನಾಟಕ ರಾಜ್ಯ ಸನ್ನದು ಲೆಕ್ಕಪರಿಶೋಧಕರ ಸಂಘದ 2021–22ನೇ ಸಾಲಿನ ಅಧ್ಯಕ್ಷರಾಗಿ ಶ್ರೀ ಚಂದನ್ ಕುಮಾರ್ ಹೆಗ್ಡೆಯವರು ಆಯ್ಕೆಯಾಗಿರುತ್ತಾರೆ. ಹಾಗೆಯೇ ಶ್ರೀ ಸುನೀಲ್ ಭಂಡಾರಿಯವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಅಭಿನಂದನೆಗಳು.



ಶ್ರೀ ಚಂದನ್ ಕುಮಾರ್ ಹೆಗ್ಡೆ

# ನಗು – ಇದರ ಅವ್ಯಕ್ತ ಶಕ್ತಿ ಏನು?



ಕೆ. ನಾಗರಾಜ ಶೆಟ್ಟಿ

"ನಗು ಎಂದರೇನು? ನಗು ಎಲ್ಲಿಂದ ಬರುತ್ತದೆ? ಏಕೆ ಬರುತ್ತದೆ? ಯಾವಾಗ ಬರುತ್ತದೆ? ಇದರಿಂದ ಯಾರಿಗೆ ಲಾಭ? ಹೀಗೆ ನಾನಾ ಕಾರಣಗಳು, ಈ ನಗುವಿನ ಕುರಿತಾದ ಪ್ರಶ್ನೆಗಳು ನಮ್ಮನ್ನು ಕಾಡುತ್ತಿರುತ್ತವೆ – ಏಕೆ?

ಜಗತ್ತಿನಲ್ಲಿ ಉಚಿತವಾಗಿ ನಿರಾಯಾಸವಾಗಿ ಹಾಗೂ ಹಾಸ್ಯದಿಂದ ಸಿಗುವ ಒಂದು ವಸ್ತು ಎಂದರೆ ನಗು. ನಗು ಒಂದು ಅನಾಮಿಕ ಸಾಂಕ್ರಾಮಿಕ ಅಂತಲೂ ಕರೆಯುತ್ತಾರೆ. ಜೊತೆಗಿದ್ದವರನ್ನೂ ತನ್ನತ್ತ ಸೆಳೆದುಕೊಳ್ಳುವ ಪರಸ್ಪರರಲ್ಲಿ ಅನ್ಯೋನ್ಯತೆ, ಪ್ರೀತಿ ಬೆಸೆಯುವ ವಿಶ್ವಾಸ ಮೂಡಿಸುವ ಒಂದು ಗುಂಪಿನಲ್ಲಿ ಚೈತನ್ಯ ತುಂಬುವ ಶಕ್ತಿ ನಗುವಿನಲ್ಲಿದೆ.

ನಗು ಎಂಬ ಸಂಜೀವಿನಿ: ನಗುವಿಗೂ, ಹೃದಯಕ್ಕೂ ಅವಿನಾಭಾವ ಸಂಬಂಧ. ಯಾರಲ್ಲಿ ಸದ್ಭಾವನೆ ಇರುತ್ತದೆಯೋ ಅವರ ಮುಖದಲ್ಲಿ ನೈರ್ಮಲ್ಯ ಭಾವ, ಪ್ರಫುಲ್ಲತೆಯ ಸೆಳೆತ ಇರುತ್ತದೆ. ನಗು ನಮ್ಮ ಭಾವೋತ್ಪತ್ತಿಯ ಪ್ರತಿಬಿಂಬ. ಮುಖ ಅರಳಿಸಿ ನಗುವುದೇ ಭಾವನೆಯ ಪ್ರತಿರೂಪವಾಗಿ ಪ್ರತಿಬಿಂಬಿಸಲ್ಪಡುತ್ತದೆ. ನಗುವಿಗೆ ಬಡತನ, ಸಿರಿತನ ಏನೂ ಇರುವುದಿಲ್ಲ. ಇದು ಮಾರುಕಟ್ಟೆಯಲ್ಲಿ ಸಿಗುವ ವಸ್ತು ಅಲ್ಲ. ಇದನ್ನು ಯಾರೂ ಖರೀದಿಸಲು ಸಾಧ್ಯವಿಲ್ಲ. ನಿಷ್ಕಲ್ಮಷ ಮನಸ್ಸಿನಿಂದ ವ್ಯಕ್ತವಾಗುವ ಭಾವನೆ ನಗುವಿನ ರೂಪದಲ್ಲಿ ಕೆಲವೊಮ್ಮೆ ಹೊರಚೆಲ್ಲುತ್ತದೆ. ಅದಕ್ಕೆ ಹೇಳುವುದು, ನಿಮ್ಮ ನಗುವೇ ಎಲ್ಲದನ್ನು ಹೇಳುತ್ತದೆ ಅಂತ. ಮನಸ್ಸಿನಲ್ಲಿ ತೊಳಲಾಟವಿದ್ದಾಗ ತಂತಾನೇ ಗಂಟಿಕ್ಕಿಕೊಳ್ಳುತ್ತದೆ. ಹೀಗಾಗಿ ಮನಸ್ಸಿನ ಮಲಿನತೆಯಿಂದ ಮುಕ್ತರಾಗಲು ನಕ್ಕುಬಿಡಿ, ನಗಿಸಿಬಿಡಿ.

'ನಗು' ಎಂದ ತಕ್ಷಣ ನೆನಪಾಗುವುದು 'ಗೋಮಟೇಶ್ವರನ ಮೂರ್ತಿಯನ್ನು. ಆಕಾಶಕ್ಕೆ ತಲೆ ಚಾಚಿ, ರಾಜ್ಯ ನೋಡಿದ, ಸಾಮ್ರಾಜ್ಯ ಆಳಿದ, ಸಂಸಾರ ನೋಡಿದ, ಸುಖ–ದುಃಖ, ನೋವು–ನಲಿವು, ಆಸೆ–ನಿರಾಸೆ, ದ್ವೇಷ–ಮಾತ್ಸರ್ಯ... ಹೀಗೆ ಬದುಕಿನಲ್ಲಿ ಏನೆಲ್ಲಾ ನೋಡಿ... ಕೊನೆಗೆ ಎಲ್ಲವೂ ತನ್ನದಲ್ಲ ಎಂದು ವಿರಾಗಿಯಾಗಿ ನಗ್ನನಾದ, ಆದರೆ ಮುಖದ ಮೇಲಿನ ಮಂದಹಾಸ (ನಗುವಿನ ಸೌಮ್ಯತೆ) ಮಾತ್ರ ಆತ ಕಳಚಿ ಇಡಲಿಲ್ಲ. ಕಾರಣ ಅದು ನಿಷ್ಕಲ್ಮಷ ನಗು, ಸ್ಪಟಿಕದಂಥ ನಗು. ಅವನ ಅರಳಿದ ತುಟಿ ನೋಡಿದರೆ ಸಾಕು, ಎಂಥವರಿಗೂ ಒಮ್ಮೆ ಭಾವೋನ್ಮುಖವಾಗುತ್ತದೆ.

ಆದರೆ ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ನಗುವನ್ನು ಮರೆಯುತ್ತಿದ್ದೇವೆ. ನಗಲು ಇರುವ ಅವಕಾಶವನ್ನು ವಿನಾಕಾರಣ ಕೈಬಿಡುತ್ತಿದ್ದೇವೆ. ಇದರಿಂದ ನಮ್ಮ ಸಾಮಾಜಿಕ, ಮಾನಸಿಕ ಹಾಗೂ ಸಾಂಗಿಕ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಅಧ್ಯಯನಗಳು ಹೇಳುತ್ತವೆ. ಅದಕ್ಕೆ ಅಲ್ಲವೇ ಇಂದು ದುಡ್ಡು ಕೊಟ್ಟು ನಗುವನ್ನು ಪಡೆಯುವ ನಗೆಹಬ್ಬ, ನಗೆಕೂಟ, ಹಾಸ್ಯಸಂಜೆ, ರಸಾಯನ ಎನ್ನುವಂಥ ತಂಡಗಳು ಹುಟ್ಟಿಕೊಂಡಿದ್ದು?

ನಗುವಿನ ಸೌಂದರ್ಯ: ಐಶ್ವರ್ಯ ರೈ, ಶಿಲ್ಪಾ ಶೆಟ್ಟಿ, ದೀಪಿಕಾ ಪಡುಕೋಣೆ ಮುಂತಾದವರು ನಗಾಡಿದರೇ ಚಂದ ಅನ್ನುವವರಿದ್ದಾರೆ. ಆದರೆ ಇಂದು ಮಹಿಳೆಯರ ಮೊಗದಲ್ಲಿ ನಗು ವಿರಳವಾಗಿರುವುದು ವಿಪರ್ಯಾಸ. ನಗುವುದಕ್ಕೂ ಇಂದು ಸ್ಪರ್ಧೆಗಳು ಏರ್ಪಡುತ್ತವೆ ಅನ್ನುವುದಾದರೆ ನಾವು ಎಲ್ಲಿಗೆ ತಲುಪುತ್ತಿದ್ದೇವೆ ನೀವೇ ಹೇಳಿ. ನಗುವಿನಿಂದ ನಿಮ್ಮ ಎಲ್ಲಾ ಅಂಗಾಂಗಗಳು ಸಡಿಲಗೊಂಡು ವಿಕಸಿತಗೊಳ್ಳುತ್ತದೆ. ಆಗ ಮುಖದಲ್ಲಿ ಸೌಂದರ್ಯದ ಪ್ರತಿಬಿಂಬ ಗೋಚರಿಸುತ್ತದೆ.

ಸೌಂದರ್ಯಕ್ಕೂ ನಗುವಿಗೂ ಅವಿನಾಭಾವ ಸಂಬಂಧ. ಕಚೇರಿ, ಮನೆ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಬ್ಯುಸಿಯಾಗಿರುವ ಮಹಿಳೆ ಮಾತು, ಹರಟೆಯಿಂದ ದೂರ ಸರಿಯುತ್ತಿದ್ದಾಳೆ. ಅದಕ್ಕೆ ನಗುವ ಅವಕಾಶಗಳು ವಿರಳವಾಗುತ್ತಿವೆ. ಎಷ್ಟೋ ಜನರಲ್ಲಿ ನಗುವಿನ ಮುಗ್ಧತೆಯನ್ನು ಕಾಣುತ್ತೇವೆ. ಎಷ್ಟೋ ಜನರಲ್ಲಿ ನಗುವೇ

ವ್ಯಕ್ತಿತ್ವವನ್ನು ಸೂಚಿಸುತ್ತದೆ. ಉದಾಹರಣೆಗೆ ಇನ್ಫೋಸಿಸ್‌ನ ಶ್ರೀಮತಿ ಸುಧಾ ನಾರಾಯಣ ಮೂರ್ತಿಯವರನ್ನೇ ನೋಡಿ. ಅವರ ಆ ನಿಷ್ಕಲ್ಮಷ ನಗುವೇ ಅವರಿಗೆ ಭೂಷಣ. ಎಷ್ಟೇ ಶ್ರೀಮಂತರಿದ್ದರೂ ಅವರ ನೈರ್ಮಲ್ಯ ಸರಳ ಬದುಕೇ ಅವರಿಗೆ ಅಲಂಕಾರ.

ನಗುವಿನಿಂದ ಒಂದಲ್ಲ, ಹತ್ತಲ್ಲ, ಸಾವಿರಾರು ಮಹತ್ವದ ಬದಲಾವಣೆಗಳು ದಿನನಿತ್ಯದ ಬದುಕಿನಲ್ಲಿ ಬಂದು ಹೋಗುತ್ತವೆ. ನಮ್ಮ ಎಷ್ಟೋ ಚಿಕ್ಕ ಪುಟ್ಟ ಸಮಸ್ಯೆಗಳು ನಗುವಿನಿಂದಲೇ ತಾತ್ಕಾಲಿಕ ಶಮನವಾಗುವುದನ್ನು ನಾವು ಕಾಣುತ್ತೇವೆ. ಒಂದು ನಗು ಒಂದು ದಿವ್ಯ ಔಷಧಿಯಾಗಿ, ಒಂದು ಪ್ರೀತಿಯ ಸೆಲೆಯಾಗಿ ರೂಪುಗೊಳ್ಳುವುದನ್ನು ನಾವು ನೋಡಬಹುದು.

ಮನಸ್ಸು ಬಿಚ್ಚಿ ಒಂದು ಬಾರಿ ನಕ್ಕರೆ ಸುಮಾರು 45 ನಿಮಿಷಗಳ ಕಾಲ ಸ್ನಾಯುಗಳು ಸಡಿಲಗೊಳ್ಳುತ್ತವೆ ಅನ್ನುವುದು ಅಧ್ಯಯನದ ಮಾತು. ರಕ್ತ ಸಂಚಾರವನ್ನು ಸುಗಮಗೊಳಿಸುವ ಮೂಲಕ ಹೃದಯದ ಕೆಲಸ ಕಾರ್ಯಗಳು ಯಶಸ್ವಿಯಾಗಿ ನಡೆಯಲು ಸಹಕಾರಿಯಾಗುತ್ತದೆ ನಗು. ಮಾತ್ರವಲ್ಲ ನಗುವಿನಿಂದ ಒತ್ತಡ ಕಡಿಮೆಯಾಗುವುದಲ್ಲದೇ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ನಗುವುದರಿಂದ ರಕ್ತದ ಒತ್ತಡವೂ ಕಡಿಮೆಯಾಗುತ್ತದೆ ಅನ್ನುವುದು ಬಲ್ಲವರ ಮಾತು.

**ಮಾನಸಿಕ ಆರೋಗ್ಯದಲ್ಲಿ ನಗುವಿನ ಮಹತ್ವ:**

- ನಗು ಶ್ವಾಸಧಮನಿಯ ಕಾರ್ಯವನ್ನು ಸುಗಮಗೊಳಿಸುತ್ತದೆ.
- ಮನಸ್ಸಿಗೆ ಉಲ್ಲಾಸ, ಸಂತೋಷ ನೀಡುತ್ತದೆ.
- ಮಾನಸಿಕ ತಳಮಳ, ಆತಂಕ, ವ್ಯಾಕುಲತೆ ಹಾಗೂ ಭಯವನ್ನು ದೂರಮಾಡುತ್ತದೆ.
- ಮನಸ್ಥಿತಿಯನ್ನು ಉತ್ತಮ ಸ್ಥಿತಿಯಲ್ಲಿಡುತ್ತದೆ.
- ಧನಾತ್ಮಕ, ಆಶಾದಾಯಕ ದೃಷ್ಟಿಕೋನವನ್ನು ಬೆಳೆಸುತ್ತದೆ.
- ಬದುಕಿನ ಹೊಸ ಆಯಾಮಕ್ಕೆ ಪುಷ್ಟಿ ನೀಡುತ್ತದೆ.
- ಯಾತನಾಮಯ ಸಂದರ್ಭಗಳಲ್ಲಿ ನಮಗರಿವಿಲ್ಲದೇ ಮಾನಸಿಕ ಧೈರ್ಯ ತುಂಬುತ್ತದೆ.
- ವ್ಯಕ್ತಿತ್ವಕ್ಕೆ ಹೊಸ ಮೆರುಗು ನೀಡುತ್ತದೆ.
- ಆರೋಗ್ಯಕ್ಕೆ ಪೂರಕವಾದ ಗ್ರಂಥಿಗಳು ಉತ್ಪತ್ತಿಯಾಗುತ್ತವೆ.
- ವೈರಿಗಳನ್ನು ಮೃದುಗೊಳಿಸುವ ಶಕ್ತಿಯ ಪಾತ್ರವನ್ನು ಹೊಂದುತ್ತದೆ.

**ಸಾಮಾಜಿಕ ಜೀವನದಲ್ಲಿ ನಗು:**

- ಸಂಬಂಧಗಳನ್ನು ಸಧೃಡಗೊಳಿಸುತ್ತದೆ.
- ಜೊತೆಗಿದ್ದವರನ್ನು ಆಕರ್ಷಿಸುತ್ತದೆ.
- ಗುಂಪಿನಲ್ಲಿರುವ ಅಭಿಪ್ರಾಯವನ್ನು ಶುದ್ಧಗೊಳಿಸುತ್ತದೆ.
- ಎಲ್ಲಾ ರೀತಿಯ ವಿರೋಧ, ಭಿನ್ನಾಭಿಪ್ರಾಯ, ಕೋಪ–ತಾಪ, ವಿವಾದಗಳನ್ನು ಶಮನಗೊಳಿಸುತ್ತದೆ.

'ನಗು'ವನ್ನು ಒಂದು ಕಲೆ ಅಂತ ಭಾವಿಸಬಹುದು. ಕೆಲವು ಹಾಸ್ಯ ಅಪಹಾಸ್ಯವಾಗಿ ಕೆಲ ಸಂದರ್ಭದಲ್ಲಿ ನಗು ವೈರುಧ್ಯವನ್ನು ಹೊಂದುತ್ತದೆ. ಕೆಲವೊಂದು ವಸ್ತು, ಆಚಾರ–ವಿಚಾರ ಕೆಲವರ ದೈಹಿಕ ಹಾವ–ಭಾವ, ಕೆಲವರ ನಡೆ–ನುಡಿ, ಕೆಲವರ ವಿಚಾರ ಮಂಡನೆಯ ಶೈಲಿ ಹೀಗೆ ಹಲವು ಸಂದರ್ಭದಲ್ಲಿ ನಗು ತನ್ನದೇ ಆದ ಪ್ರಭಾವವನ್ನು ಹೊಂದಿರುತ್ತದೆ. ದಿವಂಗತ ಹಾಸ್ಯ ನಟ ನರಸಿಂಹರಾಜುರವರನ್ನು ಸಿನಿಮಾ ಪರದೆಯ ಮೇಲೆ ನೋಡಿದ ತಕ್ಷಣ ನಗು ಬರುತ್ತದೆ. ನಗುವಿಗೆ ಯಾವುದೇ ಜಾತಿ ಧರ್ಮವಿಲ್ಲ, ಯಾವುದೇ ವ್ಯಾಪ್ತಿಯಿಲ್ಲ, ಗಡಿಯಿಲ್ಲ ಅನ್ನುವುದೇ ಇದರ ಪ್ರಾಮುಖ್ಯತೆ ತಿಳಿಯುತ್ತದೆ.

**ನಗಲು ಇರುವ ಮಾರ್ಗಗಳು:** ಅಳು, ದುಃಖ, ಯಾತನೆ, ದ್ವೇಷದಿಂದ ಕೂಡಿದ ದೃಶ್ಯಗಳನ್ನು ವೀಕ್ಷಿಸುವ ಬದಲು, ಹಾಸ್ಯ ನಗೆ ಇರುವ ಕಾರ್ಯಕ್ರಮಗಳನ್ನು ವೀಕ್ಷಿಸುವುದು.

- ಹಾಸ್ಯ, ಚಟಾಕಿ, ಸಂತೋಷ ಕೂಟಗಳನ್ನು ಆಯೋಜಿಸಲು ಸಂತಸವನ್ನು ಹಂಚಿಕೊಳ್ಳುವುದು.

- ಮಕ್ಕಳೊಂದಿಗೆ ಬೆರೆತು ಮಕ್ಕಳಾಗಿ, ಮಕ್ಕಳ ಚಲನ–ವಲನ, ಮಾತು, ಪ್ರಶ್ನೆ, ನಡೆ–ನುಡಿಯ ಕುರಿತು ಸಮಯ ಕಳೆಯಿರಿ.
- ಕಛೇರಿಯಲ್ಲಿ, ಮನೆಯಲ್ಲಿ ತಮಾಷೆಯ ನಗುವಿನ ವಾತಾವರಣವನ್ನು ಕಲ್ಪಿಸಿಕೊಳ್ಳಿ.
- ಮನೆಯವರೊಂದಿಗೆ, ಸ್ನೇಹಿತರೊಂದಿಗೆ, ನಿಮ್ಮ ಪ್ರೀತಿ ಪಾತ್ರರೊಂದಿಗೆ ತೆಗೆಸಿಕೊಂಡ ಫೋಟೋಗಳನ್ನು, ಆಚಾರ ವಿಚಾರಗಳನ್ನು, ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವುದು.

ನಗು ಯಾರ ಮನೆಯ ಸ್ವತ್ತೂ ಅಲ್ಲ. ನಮ್ಮಿಂದ ನಾವೇ ಸೃಷ್ಟಿಸಿಕೊಳ್ಳುವ ಅದ್ಭುತ ಚೈತನ್ಯ ಶಕ್ತಿ. ನಗುವಿಗೆ ಸೆಳೆತವಿದೆ, ಸೌಮ್ಯತೆಯ ಗುಣವಿದೆ, ಆಕರ್ಷಣೆ, ಸೌಂದರ್ಯವಿದೆ. ವ್ಯಕ್ತಿಯ ವ್ಯಕ್ತಿತ್ವದ ಪಾರದರ್ಶಕತೆ ಕಾಣಿಸುತ್ತದೆ. ನಗು ನಗುತ್ತಾ ಇದ್ದರೆ ಜೀವನದಲ್ಲಿ ಎದುರಾಗುವ ಸಂಕಷ್ಟಗಳನ್ನೂ ಸಲೀಸಾಗಿ ಎದುರಿಸಬಹುದು. ಹಾಗಿದ್ದರೆ ನಗಬಾರದೇಕೆ?

ನಗು ಎಲ್ಲಿಲ್ಲ, ಎಲ್ಲಿದೆ ಅಂತ ಕೇಳಿದರೆ ಎಲ್ಲವೂ ನಮ್ಮ ಮನಸ್ಥಿತಿಯಲ್ಲಿರುತ್ತದೆ. ನೋಡುವ ನೋಟದಲ್ಲಿದೆ, ಕೇಳುವ ಕಿವಿಯಲ್ಲಿದೆ, ಆಡುವ ಮಾತಲ್ಲಿರುತ್ತದೆ. ಹೀಗೆ ನಗುವಿರದ ಕ್ಷೇತ್ರವಿಲ್ಲ. ದಪ್ಪ ಹೊಟ್ಟೆಯ ದಡಿಯನನ್ನು ನೋಡಿದರೂ ನಗು, ಸಣಕಲು ಜೀವದ ಸಣ್ಣಪ್ಪನನ್ನೂ ನೋಡಿದರೂ ನಗು, ಚಿತ್ರ–ವಿಚಿತ್ರದ ವೇಷ–ಭೂಷಣದಲ್ಲೂ ನಗು, ಆಡುವ ಮಾತುಗಳಲ್ಲೂ ನಗು, ಹೀಗೆ ನಗುವಿಲ್ಲದ ಕ್ಷೇತ್ರಗಳೇ ಇಲ್ಲ ಅಂತ ಹೇಳಬಹುದು. ಕೆಲವರ ನಗೆಯಲ್ಲಿ ವ್ಯಂಗ್ಯವಿರಬಹುದು. ನಂಜು ಇರಬಹುದು, ದ್ವೇಷವಿರಬಹುದು, ಪ್ರೀತಿ ಇರಬಹುದು, ವಿಶ್ವಾಸ–ನಂಬಿಕೆ ಇರಬಹುದು, ಬಾಂಧವ್ಯದ ಪ್ರತೀಕವಿರಬಹುದು, ಹೀಗೆ ನಗುವಿನ ವ್ಯಾಪ್ತಿ ನಿಲುಕದಷ್ಟು ವ್ಯಾಪ್ತಿಯನ್ನು ಹೊಂದಿರುತ್ತದೆ. ಇದೇ ಜೀವನದ ಸೌಂದರ್ಯ, ಜೀವನ ಪ್ರೀತಿ, ಇದೇ ಜೀವನದ ಶೈಲಿಯ ಭಾಗ, ಇದೇ ವ್ಯಕ್ತಿಯ ವ್ಯಕ್ತಿತ್ವದ ಪ್ರತೀಕ ಅಂತ ನಗುವನ್ನು ಪರಿಗಣಿಸಬಹುದು.

## ಅಭಿನಂದನೆಗಳು



ಶ್ರೀಮತಿ ಅರ್ಚನಾ ಶೆಟ್ಟಿ

ಶಿವಮೊಗ್ಗ ಬಂಟರ ಯಾನೆ ನಾಡವರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಕಟ್ಟಡ ಸಮಿತಿಯ ಅಧ್ಯಕ್ಷರಾದ ಶ್ರೀ ಕೃಷ್ಣ ಶೆಟ್ಟಿಯವರ ಹಿರಿಯ ಸೊಸೆ, ಶ್ರೀ ಆದಿತ್ಯ ಶೆಟ್ಟಿಯವರ ಪತ್ನಿ ಶ್ರೀಮತಿ ಅರ್ಚನಾ ಶೆಟ್ಟಿಯವರಿಗೆ ವಾಣಿಜ್ಯ ಶಾಸ್ತ್ರದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# *Congratulations*



Dr. Raviraja Shetty G., who is working as Associate Professor and Head at Agricultural and Horticultural Research Station, Ullal, Mangalore has been conferred with Biodiversity Conservation Award from Karnataka Biodiversity Board, Jilla Panchayath Dakshina kannada and Dept. of Social Forestry, Mangalore. Bangalore Bunts Sangha congratulates and wishes him all the best.

# *Academic Excellence - Congratulations!*

## SSLC/10th STD. TOPPERS



**Arya Shetty**
S/o Satish Kumar K. Shetty
& Arathi S. Shetty
CBSE- 96.4
Delhi Public School, Bagalur,
Bangalore North



**Sathwik Kumar Shetty**
S/o Suresh Shetty M.
& Revathi Shetty
SSLC- 94.56%
Kannada-125, Hindi-100
CES Twinklers School,
Jaraganahalli

# *Academic Excellence - Congratulations!*

## PUC / 12th Std. ACHIEVER



**Madhura R. Shetty**
D/o Rathnakar Shetty
& Mallika R. Shetty
PUC (Com.)-99.3%
English-100, Economics-100,
Business Studies-100, Statistics-100
Bunts Sangha RNS Vidyaniketan,
Vijayanagar, Bangalore



**Aman A. Shetty**
S/o Ashok Shetty
& Mamatha A. Shetty
PUC (Sc.)-98%
Hindi-100, Physics-100,
Mathematics-100
Vidhyodaya PU College,
Udupi

# *Academic Excellence - Congratulations!*

## SSLC/10th STD. TOPPERS



**Sushmitha K. Shetty**
D/o Kamalaksha K. Shetty
& Asha K. Shetty
ICSE- 97%
Com. Application-100
Christ School, Bangalore

## PUC / 12th Std. ACHIEVER



**Sudiksha S. Shetty**
CA. Shashidhara Shetty N.
& Shobha S. Shetty
PUC (Sc.) -98.3%
Mathematics -100, Biology -100
City PU College, Bangalore

## ಮಹಿಳಾ ವಿಭಾಗ – 'ದಸರಾ ಆಚರಣೆ'

**ದಿನಾಂಕ: 12.10.2021, ಮಂಗಳವಾರ ಮಧ್ಯಾಹ್ನ 2.00ರಿಂದ**

**ಸ್ಥಳ : ಬಂಟರ ಸಂಘದ ಆವರಣ**

**ಕಾರ್ಯಕ್ರಮ**

- ದೇವಿ ಪೂಜೆ
- ಲಲಿತಾ ಸಹಸ್ರನಾಮ
- ಭಜನೆ
- ದಾಂಡಿಯಾ ನೃತ್ಯ
- ಪ್ರಸಾದ ವಿತರಣೆ
- ಲಘು ಉಪಹಾರ

ಸದಸ್ಯರೆಲ್ಲರೂ ತಮ್ಮ ಬಂಧು–ಬಾಂಧವರೊಡಗೂಡಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ


**ಉಪೇಂದ್ರ ಶೆಟ್ಟಿ ಆರ್.**
ಅಧ್ಯಕ್ಷರು

**ಯೋಗ್ಯ ಎಲ್. ರೈ**
ಸಂಚಾಲಕಿ, ಮಹಿಳಾ ವಿಭಾಗ
ಮೊ: 9980892311

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ
ಮೊ: 9945999255

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಮಹಿಳಾ ವಿಭಾಗದ ಸದಸ್ಯರು**

## ಅಭಿನಂದನೆಗಳು – ಡಾ। ಬಿ. ವಸಂತ ಶೆಟ್ಟಿ



**ಡಾ॥ ಬಿ. ವಸಂತ ಶೆಟ್ಟಿ**

ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ (ಎನ್.ಎಸ್.ಎಸ್) ಸಾಮಾಜಿಕ, ಶೈಕ್ಷಣಿಕ ಹಾಗೂ ಗ್ರಾಮೀಣಾಭಿವೃದ್ಧಿಗೆ ಶ್ರಮಿಸುವ ಸ್ವಯಂ ಸೇವಕರು ಹಾಗೂ ಸೇವಕಿಯರಿಗೆ ನೀಡುವ ಕೇಂದ್ರ ಸರ್ಕಾರದ ಪ್ರಶಸ್ತಿಗೆ ಡಾ। ಬಿ. ವಸಂತ ಶೆಟ್ಟಿಯವರು ಭಾಜನರಾಗಿದ್ದಾರೆ. ಅತ್ಯುತ್ತಮ ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸಿದ ರಾಜೀವ ಗಾಂಧಿ ಆರೋಗ್ಯ ಮತ್ತು ವಿಜ್ಞಾನಗಳ ವಿಶ್ವವಿದ್ಯಾಲಯದ ಪರವಾಗಿ ಕುಲಪತಿ ಡಾ। ಎಸ್. ಎಮ್. ಜಯಕರ ಶೆಟ್ಟಿಯವರು ಪ್ರಶಸ್ತಿ ಸ್ವೀಕರಿಸಿದರು.

ರಾಜೀವ ಗಾಂಧಿ ಆರೋಗ್ಯ ಮತ್ತು ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಸಚಿವ ಡಾ। ಬಿ. ವಸಂತ ಶೆಟ್ಟಿಯವರಿಗೆ "ಅತ್ಯುತ್ತಮ ಸಂಯೋಜನಾಧಿಕಾರಿ" ಗೌರವ ಲಭಿಸಿದೆ.



**ಕು। ಬಿಂದಿಯಾ ಶೆಟ್ಟಿ**

ಇದೇ ಕಾರ್ಯಕ್ರಮದ ಅಡಿಯಲ್ಲಿ ಸುರತ್ಕಲ್‌ನ ಗೋವಿಂದದಾಸ ಕಾಲೇಜಿನ ಕು। ಬಿಂದಿಯಾ ಶೆಟ್ಟಿಯವರಿಗೆ "ಅತ್ಯುತ್ತಮ ಸ್ವಯಂ ಸೇವಕಿ" ಪ್ರಶಸ್ತಿ ಲಭಿಸಿದೆ. ಸೆಪ್ಟಂಬರ್ ತಿಂಗಳ 24ನೇ ತಾರೀಕಿನಂದು ಕೇಂದ್ರ ಸರ್ಕಾರದ ಯುವಜನ ಮತ್ತು ಕ್ರೀಡಾ ಮಂತ್ರಾಲಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತದ ಗೌರವಾನ್ವಿತ ರಾಷ್ಟ್ರಪತಿ ಸನ್ಮಾನ್ಯ ಶ್ರೀ ರಾಮನಾಥ ಕೋವಿಂದ್‌ರವರು ಪ್ರಶಸ್ತಿ ಪ್ರಧಾನ ಮಾಡಿದರು.

**ಬಂಟರ ಸಂಘ ಬೆಂಗಳೂರು - ಸಾಂಸ್ಕೃತಿಕ ವಿಭಾಗ**

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ - 2021-22

**ಸ್ಥಳ : ಬಂಟರ ಸಂಘದ ಆವರಣ**

**ದಿನಾಂಕ : 18.12.2021, ಶನಿವಾರ, ಮಧ್ಯಾಹ್ನ 02.30 ರಿಂದ**

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ 16.12.2021**

1. **ರಂಗೋಲಿ (ಚುಕ್ಕಿ ರಂಗೋಲಿ) (RANGOLI - Powder Only)**

**ಪ್ರವೇಶ ಶುಲ್ಕ : ರೂ. 100/– ಪ್ರತಿ ವ್ಯಕ್ತಿಗೆ**
ಕಾಲಾವಕಾಶ : 45 ನಿಮಿಷ
ವಯೋಮಿತಿ : ಎ) 20 ವರ್ಷದ ಒಳಗೆ
ಬಿ) 20 ವರ್ಷ ಮೇಲ್ಪಟ್ಟು

* ಸ್ಪರ್ಧಿಗಳ ಸಂಖ್ಯೆ ಕಡಿಮೆ ಇದ್ದ ಪಕ್ಷದಲ್ಲಿ ವಯೋಮಿತಿಯನ್ನು ಮುಕ್ತ ಎಂದು ಪರಿಗಣಿಸಲಾಗುವುದು

2. **ಚಿತ್ರ ಬಿಡಿಸುವುದು (DRAWING)**

**ಪ್ರವೇಶ ಶುಲ್ಕ : ರೂ. 100/– ಪ್ರತಿ ವ್ಯಕ್ತಿಗೆ**
ಕಾಲಾವಕಾಶ : 45 ನಿಮಿಷ
**ವಯೋಮಿತಿ** : ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು

---

**ದಿನಾಂಕ : 19.12.2021, ಭಾನುವಾರ, ಬೆಳಿಗ್ಗೆ 09.30 ರಿಂದ**

**ಸ್ಥಳ : ಬಂಟರ ಸಂಘದ ಆವರಣ**

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ 16.12.2021**

1. **ಛದ್ಮವೇಷ (FANCY DRESS)**

**ಪ್ರವೇಶ ಶುಲ್ಕ : ರೂ. 100/–** **ಕಾಲಾವಕಾಶ : 2 ನಿಮಿಷ**
**ವಯೋಮಿತಿ** : ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ 16 ವರ್ಷ ಮೇಲ್ಪಟ್ಟು

(ಹಿನ್ನೆಲೆ ಧ್ವನಿ / ಸಂಗೀತವನ್ನು ಪರಿಗಣಿಸಲಾಗುವುದು)

2. **ಆಶು ಭಾಷಣ (PICK & SPEECH) – ಕನ್ನಡ / English**

**ಪ್ರವೇಶ ಶುಲ್ಕ : ರೂ. 100/–** **ಕಾಲಾವಕಾಶ : 2 ನಿಮಿಷ**

**ವಯೋಮಿತಿ :** ಎ) 6 ವರ್ಷ ಮೇಲ್ಪಟ್ಟು 10 ವರ್ಷದ ಒಳಗೆ

ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ

ಡಿ) 30 ವರ್ಷ ಮೇಲ್ಪಟ್ಟು (ಕಾಲಾವಕಾಶ 3 ನಿಮಿಷ)

3. **ಸಂಗೀತ (MUSIC)**

**ಪ್ರವೇಶ ಶುಲ್ಕ : ರೂ. 100/–** ಪ್ರತಿ ವ್ಯಕ್ತಿಗೆ, **ರೂ. 200/–** ಪ್ರತಿ ಗುಂಪಿಗೆ

ಎ. **ಶಾಸ್ತ್ರೀಯ ಸಂಗೀತ–ಹಿಂದೂಸ್ಥಾನಿ / ಕರ್ನಾಟಿಕ – ಕಾಲಾವಕಾಶ 3 ನಿಮಿಷ**
**(Shastriya Sangeetha (Hindustani/ Karnatic)**

ವಯೋಮಿತಿ : ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ

ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಸಿ) 16 ವರ್ಷದ ಮೇಲ್ಪಟ್ಟು

**ಮಧ್ಯಾಹ್ನ 01.30 ರಿಂದ**

ಬಿ. **ಸುಗಮ ಸಂಗೀತ ಕಾಲಾವಕಾಶ 2 ½ ನಿಮಿಷ**

ಸಿ. **ಸಿನಿಮಾ ಗೀತೆಗಳು (Film Song) - ಕಾಲಾವಕಾಶ 2 ½ ನಿಮಿಷ**

**ವಯೋಮಿತಿ :** ಎ) 6 ರಿಂದ 10 ವರ್ಷದವರೆಗೆ

ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ

ಸಿ) 16 ವರ್ಷ ಮೇಲ್ಪಟ್ಟು 25 ವರ್ಷದವರೆಗೆ

ಡಿ) 25 ವರ್ಷ ಮೇಲ್ಪಟ್ಟು

ಡಿ. **ಸಮೂಹ ಗಾನ (Group Song-Open for all- 3 members & above)**

**ಕಾಲಾವಕಾಶ 2 ½ ನಿಮಿಷ**

ಇ. **ಅಂತ್ಯಾಕ್ಷರಿ – ಹಿಂದಿ ಮತ್ತು ಕನ್ನಡ (Anthakshari – Hindi & Kannada) – ಸಂಜೆ 5.00 ರಿಂದ**

**ವಯೋಮಿತಿ :** ಮುಕ್ತ (ಪ್ರತೀ ತಂಡಕ್ಕೆ 3 ಸದಸ್ಯರು)

**ಪ್ರವೇಶ ಶುಲ್ಕ : ರೂ. 200/– ಪ್ರತೀ ತಂಡಕ್ಕೆ**

**ದಿನಾಂಕ 02.01.2022, ಭಾನುವಾರ, ಬೆಳಿಗ್ಗೆ 9.30 ರಿಂದ, ಸ್ಥಳ : ಬಂಟರ ಸಂಘದ ಆವರಣ**

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ 30.12.2021**

**4. ನೃತ್ಯ (Dance)**

**1. ಶಾಸ್ತ್ರೀಯ ನೃತ್ಯ (Indian Classical Solo)** **2. ಜಾನಪದ ನೃತ್ಯ (Folk Solo)**

**3. ಫ್ರೀ ಸ್ಟೈಲ್ (Free- Style –Solo)** **4. ಜೋಡಿ ನೃತ್ಯ (Couple Dance-M & F)**

**5. ಸಮೂಹ ನೃತ್ಯ (Group Dance - 3 members & above - open)**

**ಪ್ರವೇಶ ಶುಲ್ಕ : ಎ) ಪ್ರತೀ ವ್ಯಕ್ತಿಗೆ – ರೂ. 100/– ಬಿ) ಪ್ರತೀ ತಂಡಕ್ಕೆ / ಜೋಡಿಗೆ ರೂ. 200/–**

| | ವಯೋಮಿತಿ | ಕಾಲಾವಕಾಶ |
|---|---|---|
| ಎ) | 6 ವರ್ಷ ಮೇಲ್ಪಟ್ಟು 10 ವರ್ಷದ ವರೆಗೆ | 2 + 1 ನಿಮಿಷ |
| ಬಿ) | 10 ವರ್ಷ ಮೇಲ್ಪಟ್ಟು 14 ವರ್ಷದವರೆಗೆ | 2 + 1 ನಿಮಿಷ |
| ಸಿ) | 14 ವರ್ಷ ಮೇಲ್ಪಟ್ಟು 18 ವರ್ಷದವರೆಗೆ | 2 + 1 ನಿಮಿಷ |
| ಡಿ) | 18 ವರ್ಷದ ಮೇಲ್ಪಟ್ಟು 35 ವರ್ಷದವರೆಗೆ | 2 + 1 ನಿಮಿಷ |
| ಇ) | 35 ವರ್ಷದ ಮೇಲ್ಪಟ್ಟು | 2 + 1 ನಿಮಿಷ |
| ಎಫ್) | ಜೋಡಿ ನೃತ್ಯ (ಮುಕ್ತ) | 2 + 1 ನಿಮಿಷ |
| ಜಿ) | ಸಮೂಹ ನೃತ್ಯ (ಮುಕ್ತ) | 2 + 1 ನಿಮಿಷ |

**(ಶಾಸ್ತ್ರೀಯ ನೃತ್ಯಕ್ಕೆ ಕಾಲಾವಕಾಶ – 3 +1 ನಿಮಿಷ)**

| | | | | | |
|---|---|---|---|---|---|
| ಚೇತನ್ ಶೆಟ್ಟಿ | – | 9880299389 | ಜಯರಾಮ ಶೆಟ್ಟಿ | – | 9901875904 |
| ಶೋಭಾ ಎನ್. ಶೇಖ | – | 9901885998 | ಉಮೇಶ್ ರೈ | – | 9035899044 |
| ಸುಚಿತ್ರ ಎ. ಶೆಟ್ಟಿ | – | 9663406333 | ರವೀಂದ್ರನಾಥ ಮಾರ್ಲ | – | 9845392696 |
| ಮೀರಾ ವಿ. ಶೆಟ್ಟಿ | – | 9972041130 | ಕೃತಿ ಶೆಟ್ಟಿ | – | 9686475434 |
| ಮಮತಾ ಪಿ. ಶೆಟ್ಟಿ | – | 9900087520 | ಮಹೇಶ್ ಶೆಟ್ಟಿ | – | 9980951966 |
| ಪ್ರಸಾದ್ ಶೆಟ್ಟಿ | – | 9845720219 | ಗೀತಾಂಜಲಿ ಎಸ್. ಶೆಟ್ಟಿ | – | 9449854330 |
| ಪ್ರಸನ್ನ ಶೆಟ್ಟಿ | – | 9880474995 | ಯೋಗ್ಯ ಎಲ್. ರೈ | – | 9980892311 |
| ಪೌರುಷ್ ಶೆಟ್ಟಿ | – | 9743711777 | ಅಮೂಲ್ಯ ಶೆಟ್ಟಿ | – | 8095537728 |

- ಎಲ್ಲಾ ಸ್ಪರ್ಧೆಗಳು ನಿಗದಿಪಡಿಸಿದ ಸಮಯದಲ್ಲೇ ನಡೆಯುವುದು. ಸ್ಪರ್ಧಿಗಳು ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ತಮ್ಮ ಹಾಜರಾತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- **ನಿಗದಿತ (ಕೊನೆಯ) ದಿನಾಂಕದ ನಂತರ ಬಂದ ನೋಂದಣಿಗಳನ್ನು ಸ್ವೀಕರಿಸಲಾಗುವುದಿಲ್ಲ.** ನೋಂದಣಿಯನ್ನು ಮೊದಲೇ ಮಾಡಿಸಿದ್ದಲ್ಲಿ ಮಾತ್ರ ಪ್ರವೇಶ ಶುಲ್ಕವನ್ನು ಸ್ಥಳದಲ್ಲಿ ಸ್ವೀಕರಿಸಲಾಗುವುದು. ಸ್ಪರ್ಧೆಯ ವೇಳೆಯಲ್ಲಿ ಕಡ್ಡಾಯವಾಗಿ ರಶೀದಿಯನ್ನು ತೋರಿಸತಕ್ಕದ್ದು. ಸ್ಪರ್ಧೆ ತಡರಾತ್ರಿಯವರೆಗೆ ನಡೆದು ಸ್ಪರ್ಧಿಗಳಿಗೆ ಹಾಗೂ ತೀರ್ಪುಗಾರರಿಗೆ ಅನಾನುಕೂಲವಾಗದಂತೆ ಮಾಡಲು ನಿಗದಿತ ದಿನಾಂಕದ ಮೊದಲು ನೋಂದಣಿ ಕಡ್ಡಾಯ.

**ಈ ಎಲ್ಲಾ ಸ್ಪರ್ಧೆಗಳಿಗೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ**

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಉಪೇಂದ್ರ ಶೆಟ್ಟಿ ಆರ್.**
ಅಧ್ಯಕ್ಷರು

**ಪಿ. ಪ್ರಸಾದ್ ಶೆಟ್ಟಿ**
ಸಂಚಾಲಕ, ಸಾಂಸ್ಕೃತಿಕ ಸಮಿತಿ
ಮೊ: 9845605958

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಅಧ್ಯಕ್ಷರು, ಸಾಂಸ್ಕೃತಿಕ ಸಮಿತಿ
ಮೊ: 9845376085

# ಕುಂದಾಪುರ ಯುವ ಬಂಟರ ಸಂಘದಿಂದ ಜನಪ್ರತಿನಿಧಿಗಳು ಮತ್ತು ಆಶಾ ಕಾರ್ಯಕರ್ತೆಯರಿಗೆ ಸನ್ಮಾನ



ಯುವ ಬಂಟರ ಸಂಘ ಕುಂದಾಪುರ ತಾಲೂಕು ವತಿಯಿಂದ ಕುಂದಾಪುರ ಹಾಗೂ ಬೈಂದೂರು ತಾಲೂಕು ವ್ಯಾಪ್ತಿಯಲ್ಲಿ ನೂತನವಾಗಿ ಆಯ್ಕೆಯಾದ ಬಂಟ ಸಮುದಾಯದ ಗ್ರಾ.ಪಂ. ಸದಸ್ಯರು, ಪುರಸಭೆ ಸದಸ್ಯರು ಹಾಗೂ ಕೋವಿಡ್ ನಿರ್ವಹಣೆಯಲ್ಲಿ ನಿರಂತರವಾಗಿ ಶ್ರಮಿಸಿದ ಆಶಾ ಕಾರ್ಯಕರ್ತೆಯರಿಗೆ ಅಭಿನಂದನಾ ಸಮಾರಂಭ ಇಲ್ಲಿನ ಆರ್.ಎನ್. ಶೆಟ್ಟಿ ಸಭಾಭವನದಲ್ಲಿ ನಡೆಯಿತು.

ಸಮಾರಂಭವನ್ನು ಉದ್ಘಾಟಿಸಿದ ಮಂಗಳೂರಿನ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಐಕಳ ಹರೀಶ್ ಶೆಟ್ಟಿ ಮಾತನಾಡಿ ಗ್ರಾ.ಪಂ. ಪುರಸಭೆಯಲ್ಲಿ ಗೆದ್ದಿರುವ ಎಲ್ಲಾ ಸದಸ್ಯರು ನಮ್ಮ ಆಸ್ತಿಯಾಗಿದ್ದು, ಅವರನ್ನು ಹಾಗೂ ಆಶಾ ಕಾರ್ಯಕರ್ತೆಯರನ್ನು ಗುರುತಿಸಿ ಗೌರವಿಸುತ್ತಿರುವುದು ಅಭಿನಂದನಾರ್ಹ ಎಂದರು.

ಜನರ ಸೇವೆ ಮಾಡುವ ಜನಪ್ರತಿನಿಧಿಗಳು ಹಾಗೂ ಕೋವಿಡ್ ಸಮಯದಲ್ಲಿ ಜೀವದ ಹಂಗು ತೊರೆದು ಶ್ರಮಿಸಿದ ಆಶಾ ಕಾರ್ಯಕರ್ತೆಯರನ್ನು ಅಭಿನಂದಿಸುತ್ತಿರುವುದು ಶ್ಲಾಘನೀಯ ಎಂದು ಮಾಜಿ ಶಾಸಕ, ಕಾರ್ಮಿಕ ಮುಖಂಡ ಬಸ್ರೂರು ಶ್ರೀ ಅಪ್ಪಣ್ಣ ಹೆಗ್ಡೆಯವರು ಹೇಳಿದರು.

ಹಲವರಿಗೆ ಸನ್ಮಾನ: ಈ ಸಂದರ್ಭದಲ್ಲಿ ಬೈಂದೂರು ಹಾಗೂ ಕುಂದಾಪುರ ತಾಲೂಕಿನ ವಿವಿಧ ಗ್ರಾ.ಪಂ.ಗಳ ಒಟ್ಟು 192 ಸದಸ್ಯರು, ಇಬ್ಬರು ಪುರಸಭೆ ಸದಸ್ಯರು ಹಾಗೂ 52 ಮಂದಿ ಆಶಾ ಕಾರ್ಯಕರ್ತೆಯರನ್ನು ಸಮ್ಮಾನಿಸಲಾಯಿತು. ಈ ವೇಳೆ ಆಶಾ ಕಾರ್ಯಕರ್ತೆಯರಿಗೆ ಗೌರವಧನವನ್ನು ಹಸ್ತಾಂತರಿಸಲಾಯಿತು.

ಬೆಂಗಳೂರು ಬಂಟರ ಸಂಘದ ಅಧ್ಯಕ್ಷ ಶ್ರೀ ಆರ್. ಉಪೇಂದ್ರ ಶೆಟ್ಟಿ, ಉಪಾಧ್ಯಕ್ಷೆ ಶ್ರೀಮತಿ ಅಮೃತ ಎಸ್. ಶೆಟ್ಟಿ, ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಪ್ರ. ಕಾರ್ಯದರ್ಶಿ ಶ್ರೀ ಇಂದ್ರಾಳಿ ಜಯಕರ ಶೆಟ್ಟಿ ಮತ್ತು ಅನೇಕ ಗಣ್ಯರು ಸಭೆಯಲ್ಲಿ ಭಾಗವಹಿಸಿದ್ದರು.

# BUNTS' SANGHA BANGALORE
## Industry and Start up Committee
## BUNTS' ENTREPRENEURS' MEET

Bunts' Sangha Bangalore is organising BUNTS' ENTREPRENEURS' MEET on 27/11/2021 at Sangha Premises.

Objective of the Meet is to bring all the Entrepreneurs /Industrialists under single platform for business networking.

All the Entrepreneurs /Industrials members are requested to make use of this event and register with the following details :

1. Name :
2. Organisation Name :
3. Type of industry : Manufacturing / Service
4. Interested in Event Stall :
5. Email :
6. Contact No. :

Interested members may please contact Sangha Office or
**CA.Vijay Shetty on Mobile 9880510191 for more details :**

**Madhukar M. Shetty**
Hon. Secretary

**R. Upendra Shetty**
President

**Raviraj Shetty Shiroor**
Convenor

**CA. Vijay Shetty**
Chairman

**Industry and Startup Committee**

## ಸುರತ್ಕಲ್ ಬಂಟರ ಸಂಘದ ಮಹಿಳಾ ವೇದಿಕೆಯ ಅಧ್ಯಕ್ಷೆಯಾಗಿ ಚಿತ್ರಾ ಜೆ ಶೆಟ್ಟಿ ಆಯ್ಕೆ



ಮಹಿಳಾ ವೇದಿಕೆ, ಬಂಟರ ಸಂಘ ಸುರತ್ಕಲ್ ಇದರ 2021–23 ನೇ ಸಾಲಿನ ನೂತನ ಅಧ್ಯಕ್ಷೆಯಾಗಿ ಚಿತ್ರಾ ಜೆ. ಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು. ಸುರತ್ಕಲ್ ಬಂಟರ ಭವನದಲ್ಲಿ ನಡೆದ ಮಹಿಳಾ ವೇದಿಕೆಯ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಉಪಾಧ್ಯಕ್ಷೆಯಾಗಿ ಭವ್ಯಾ ಎ. ಶೆಟ್ಟಿ, ಕಾರ್ಯದರ್ಶಿಯಾಗಿ ಸರೋಜ ಟಿ ಶೆಟ್ಟಿ, ಜತೆ ಕಾರ್ಯದರ್ಶಿಯಾಗಿ ರಾಜೇಶ್ವರಿ ಡಿ. ಶೆಟ್ಟಿ, ಕೋಶಾಧಿಕಾರಿಯಾಗಿ ಶೈಲಾ ಎಸ್ ಶೆಟ್ಟಿ, ಸಂಘಟನಾ ಕಾರ್ಯದರ್ಶಿಯಾಗಿ ಭಾರತಿ ಜಿ. ಶೆಟ್ಟಿ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಕೇಸರಿ ಎಸ್ ಪೂಂಜ, ಕ್ರೀಡಾ ಕಾರ್ಯದರ್ಶಿಯಾಗಿ ಅಕ್ಷತಾ ಜಿ ಶೆಟ್ಟಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ದೀಪಾವಳಿ ಸಂಭ್ರಮಾಚರಣೆ

**ದಿನಾಂಕ: 07.11.2021, ಭಾನುವಾರ, ಸಮಯ: ಸಂಜೆ 5.30ರಿಂದ**

**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

**ಅಧ್ಯಕ್ಷತೆ:**

**ಶ್ರೀ ಆರ್. ಉಪೇಂದ್ರ ಶೆಟ್ಟಿ**

ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

**ತಮಗೆ ಆದರದ ಸ್ವಾಗತ**

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

## ಶ್ರದ್ಧಾಂಜಲಿ



**ಡಾ. ಶರತ್ ಕುಮಾರ್ ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL004854

ಖ್ಯಾತ ವೈದ್ಯರಾದ ಡಾ। ಹರ್ಕೂರು ಶಂಕರ್ ಶೆಟ್ಟಿ ಮತ್ತು ಕೊರ್ಗಿ ಶುಭಾವತಿ ಶೆಟ್ಟಿಯವರ ಪುತ್ರ, ಪ್ರಗತಿ ಸ್ಕ್ಯಾನಿಂಗ್ ಸೆಂಟರ್‌ನ ಮಾಲೀಕರು, ರೆಡಿಯೋಲಾಜಿಸ್ಟ್ ಕೊರ್ಗಿ ಡಾ. ಶರತ್ ಕುಮಾರ್ ಶೆಟ್ಟಿಯವರು ದಿನಾಂಕ 24.09.2021ರಂದು ತಮ್ಮ 61ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಪೆರ್ಲ ಶ್ರೀಮತಿ ಸರ್ವೇಶ್ವರಿ ಎಸ್. ಶೆಟ್ಟಿ, ಓರ್ವ ಪುತ್ರಿ, ಇಬ್ಬರು ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಕಾಳಾವರ ಶ್ರೀ ಸುಧಾಕರ ಶೆಟ್ಟಿಯವರು ದಿನಾಂಕ 01.10.2021ರಂದು ತಮ್ಮ 71ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ಪತ್ನಿ ಹೆಬ್ರಿ ಶ್ರೀಮತಿ ಶೋಭಾ ಎಸ್. ಬಲ್ಲಾಳ್, ಓರ್ವ ಪುತ್ರ, ಓರ್ವ ಪುತ್ರಿ, ನಾಲ್ವರು ಮೊಮ್ಮಕ್ಕಳು, ಓರ್ವ ಸಹೋದರ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಸುಧಾಕರ ಶೆಟ್ಟಿ ಕೆ.**
ಸದಸ್ಯತ್ವ ಸಂಖ್ಯೆ: CL001611




Creating life-long bonds
Since 18 Years
HOME FOR ALL
AVAIL THE BENEFITS OF
PMAY
Interest Subsidy Upto ₹ 2.67 lakh*
*Conditions Apply
PRADHAN MANTRI AWAS YOJANA
RERA Approved
SAI MATHA GARDEN
Surathkal, Mangaluru.
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire
Just pay ₹50 K to book your dream home
Budget flats 18 Lakhs Onwards
NEAR TO BEACH & RAILWAY STATION
International Airport Road, Surathkal
MATHA Jyothi Residency
NH - 66, Mukka
MATHA Sushiganga Residency, Mulky
NH - 66, Mulky
On Going Project in Padubidri
Project Approved in all Nationalized Bank
MATHA Builders & Developers
Developers Pvt. Ltd.
Surathkal: Thara Towers, 2nd Floor, International Airport Road, Surathkal, Mangaluru - 575 014.
Mumbai: Shop No. 8, Bldg. No. 1, New Venkateshwar Nagar, Cabin Road Bhayandar (E), Thane Dist - 401 105.
7022481666
9980711966
mathadevelopers108@gmail.com
www.mathadevelopers.com
CREDAI
7259209966
7259269966 (Mumbai)
Best Investment with Assured Rental Return


ADVT.


Opening Soon
@ Lulu Global Mall
Bengaluru
Alma Carino™
Fine Jewellery
UAE | INDIA
www.almacarino.com

ADVT.


pks Tindimani
Premium Home Made
Sweets | Snacks | Masalas
Home made coastal delicacy
Thambittu
500gms ₹ 240/-
Rava Laddu
500gms ₹ 200/-
Wheat Halwa
500gms ₹ 260/-
Athrasa (Kajjaya)
500gms ₹ 220/-
Sukkina Unde
(Aralina Unde)
500gms ₹ 200/-
Godhi Laddu
500gms ₹ 360/-
Assorted Laddu
& Sweets Gift Box
500gms ₹ 495/-
ಸಾಂಪ್ರದಾಯಿಕ ಸೀಮಂತ
We Specialize in
Baby Shower Function Sweets
Traditional Nutritional & Immunity Supplements
Shunti Cheyi (Leha)
Ginger, Coconut & Jaggary
500gms ₹ 350/-
Methi Cheyi (Leha)
Fenugreek, Coconut & Jaggary
500gms ₹ 300/-
Methi Bajil
Methi, Beaten Rice, Coconut & Jaggary
500gms ₹ 300/-
Home made Nutritional Baby Food (6 Months to 3 Years)
[Sprouted Ragi, Wheat, Greengram, Chennadhal, Toordhal]
Kundapura Masala Powder
500gms ₹ 350/-
99453 20311
www.pkstindimani.com
Please Place Your Orders in advance
We use Dunzo Delivery Services.
Delivery charges as applicable

ADVT

ಸ್ಥಾಪನೆ : 1997

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

## Vijaya Pathina Souharda Sahakari Niyamitha

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು–560 040. ದೂರವಾಣಿ: 23393444 ಮೊಬೈಲ್ : 8722006082
E-mail: vijaya_souharda@yahoo.in, vijayasouharda@rediffmail.com

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. 25ರ ರಜತ ಸಂಭ್ರಮಕ್ಕೆ ಕಾಲಿಡುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

**ಸಾಲಗಳು**

- ಜಾಮೀನು ಸಾಲ : ರೂ. 50,000/–
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು – 13%**

**2016–17 ರಿಂದ ಕ್ರಮವಾಗಿ 15% ವಾರ್ಷಿಕ ಡಿವಿಡೆಂಡ್ ವಿತರಣೆ**
**ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ**

**ವ್ಯವಹಾರದ ವೇಳೆ**

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

**ಅಪೆಕ್ಸ್ ಬ್ಯಾಂಕ್‌ನ ಎಲ್ಲಾ ರಜೆಗಳೂ (ವಾರದ ರಜಾ ಹೊರತು ಪಡಿಸಿ) ಅನ್ವಯಿಸುತ್ತವೆ.**

ನಿರ್ದೇಶಕರುಗಳು :

ಶ್ರೀ ಕೆ. ಭಗವಾನ್ ದಾಸ್ ರೈ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಸ್ಥಾಪಕ ಅಧ್ಯಕ್ಷರು : ದಿ॥ ಡಾ॥ ಐ.ವಿ. ಶೆಟ್ಟಿ – 1997
ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
ಅಧ್ಯಕ್ಷರು

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
ಉಪಾಧ್ಯಕ್ಷರು

ADVT

Newly Open

# Hyperscoop ICE CREAM

Come Try Our Special Mangalore Gudbud!!




www.hyperscoop.in

080-41622316

LOOK FOR US ON

SWIGGY zomato DUNZO amazon

| PREMIUM ICE CREAM | SUNDAE | NATURAL ICE CREAM |
|---|---|---|
| Black Currant | Gudbad | Mango |
| Belgium Chocolate | Lychee Sundae | Guava |
| Banana Caramel | Excess Chocolate | Custard Apple |
| Cheesecake | Midnight Summer | Tender coconut |
| Red Velvet | Hot Fudge Sundae | Dry Fruit Delight |




G R Arcade #1788/23, 5th Main, 9th Cross,
Hampinagar, RPC Layout, Bangalore-560104.
Ph: 080-41622316

Brought to you by ADLABS

ADVT.

REGISTERED KA/BGW-1589/2021-2023 RNI NO: KARBIL/2005/16402, Date of publication 07.10.2021
Licenced post without prepayment License No. WPP-219, Total No. of page 36+4=40
Licenced to post at Bangalore PSO, Mysore Road, Bengaluru-560026, on 10th or 12th of every Month




ADVT

Printed and Published by : Sri Madhukar M. Shetty on Behalf of Bunts' Sangha Bangalore
#324, Bunts' Sangha Complex, Chord Road, Vijayanagar, Bengaluru - 560 040. Editor : M. Muralidhara Hegde
Printed at Sairam Printers, Vijayanagar, Bengaluru - 560 040. Mob : 9845630847